**A Circumnavigation to the world of Dance and Performing Arts : A complete Journal**

**RNI No :KARKAN/2009/29752**

**ಶ್ರಾವಣ–ಭಾದ್ರಪದ 2011**

**ಸಂಚಿಕೆ : 4    ಸಂಪುಟ : 5**

ನೂಪುರ ಭ್ರಮರಿ

ಸಂಪಾದಕರು : ಮನೋರಮಾ ಬಿ.ಎನ್.
ಪ್ರಸರಣಾಧಿಕಾರಿ : ವಿಷ್ಣುಪ್ರಸಾದ್ ನಿಡ್ಡಾಜೆ
ಕಛೇರಿ ನಿರ್ವಹಣೆ : ರಾಜ್‌ಗೋಪಾಲ್ ಬಿ.ಎನ್.
ಪ್ರಕಾಶನ : ಶ್ರೀ ಸಾನ್ನಿಧ್ಯ ಪ್ರಕಾಶನ (ರಿ.), ಮಡಿಕೇರಿ
ಪುಟ ವಿನ್ಯಾಸ : ಲಾವಣ್ಯ ಪ್ರಿಂಟರ್ಸ್, ಬೆಂಗಳೂರು

## ವರ್ಷ ವೈಭವ

**ಅಂತರಂಗ.....**

- ಮಂಜೀರ.......... 2
- ಲಲಿತ ಲಹರಿ : ಅಷ್ಟನಾಯಿಕೆಯರ ಚಿತ್ತವೃತ್ತಿ: ವಿಪ್ರಲಬ್ಧೆ.......... 4
- ಹಸ್ತ ಮಯೂರಿ : ತ್ರಿಶೂಲ ಹಸ್ತ.......... 9
- ದೀವಟಿಗೆ : ಫಲಪ್ರದವೆನಿಸಿದ ಡಾ.ಪದ್ಮಾ ಸುಬ್ರಹ್ಮಣ್ಯಂ ನೇತೃತ್ವದ ಶಿಬಿರ..........10
  ಆಹಾರ್ಯ, ಆಂಗಿಕಕ್ಕಷ್ಟೇ ತೃಪ್ತವಾದ 'ಹೊಯ್ಸಳ ವೈಭವ'..........11
  ಅಚ್ಚುಕಟ್ಟಿನ ಲಯ, ರಸಾನುಭೂತಿ : ಶ್ರೀಮತಿ ಅರ್ಚನಾ ಮತ್ತು ಚೇತನಾ..........11
  ಕರ್ನಾಟಕ ನೃತ್ಯ ವೈಭವದ ಪ್ರಸ್ತುತಿಗೆ ಸಾಕಾರ ಯತ್ನ : ಭರತಾಗಮ..........12
- ನಿಮ್ಮ ಬರೆಹ ನಮ್ಮ ಓದು / ಸಂಶೋಧನಾ ಸಂಗ್ರಹ ಸಮೀಕ್ಷೆ..........14
- ಅಂಗಳದ ಮಾತು ತಿಂಗಳ ಚರ್ಚೆ : ನೃತ್ಯ ಪಥ್ಯ..........15
  ದಲಿತರು ಮತ್ತು ನೃತ್ಯ..........16
  ಭಕ್ತಿ ಶೃಂಗಾರ v/s ಶೃಂಗಾರ..........17
- ದರ್ಪಣ : ನೃತ್ಯ ರಂಗದ ಅನಭಿಷಿಕ್ತ ರಾಣಿ : ರುಕ್ಮಿಣಿ (ಭಾಗ 15)..........18
- ರಂಗಸ್ಥಳ: ಅರುವತ್ತಾರರಲ್ಲೂ ಅಬ್ಬರಿಸುತ್ತಿರುವ ಅಭಿಮನ್ಯು ! ..........21

All rights reserved. Reproduction in any manner, electronic or otherwise, in whole or in part without prior written permission is prohibited. Views and Opinions expressed by authors in the articles published in NOOPURA BHRAMARI are their ownnot of Noopura Bhramari.

Visit our website : **www.noopurabhramari.com**
for the latest news, views and other updates.

ನೂಪುರ ಭ್ರಮರಿಗೆ ಲೇಖನ–ವಿವರ–ವಿಚಾರ–ಅಭಿಪ್ರಾಯ ಇತ್ಯಾದಿಗಳನ್ನು ಬರೆಯುವವರು
ಪ್ರತೀ ಎರಡನೇ ತಿಂಗಳ 1ನೇ ತಾರೀಕಿನ ಒಳಗಾಗಿ ಕಳಿಸಬೇಕಾಗಿ ಕೋರಿಕೆ.



## ಮಂಜೀರ

'ಎಂ.ಎಫ್.ಹುಸೇನ್ ಸತ್ತಾಗ ಅವನನ್ನು ಹೊಗಳಿ ತುಚ್ಛ ಲೇಖನಗಳು ಕರ್ನಾಟಕದ ಎಲ್ಲಾ ಮುಖ್ಯ ದಿನಪತ್ರಿಕೆಗಳಲ್ಲೂ ಬಂದಿದೆ. ತನಗೆ ಬೇಕಾದಷ್ಟು ತನ್ನ ಪಾಲಿನ ಅಶ್ಲೀಲತೆಯನ್ನು, ನಮ್ಮ ದೇಶದ ಕುರಿತು ಅನೇಕಾನೇಕ ನೀಚತನವನ್ನು ಹುಸೇನರು ತೋರ್ಪಡಿಸಿದುದನ್ನು ಹೇಸಿಗೆಯಿಲ್ಲದೆ ಹೊಗಳಿ ಬರೆದವರೂ ಇದ್ದಾರೆ. ಹಿಂದೆಯೂ ಒಂದೆರಡು ಬಾರಿ ಈ ಕುರಿತು ಓದಿದ್ದು ನೆನಪಿದೆ. ಆಗ ನಾನು 'ಅಯ್ಯೋ' ಇದನ್ನು ಓದುಗರು ಹೀಗೆ ಬಿಟ್ಟಿದ್ದಾರಲ್ಲಾ ಎಂದು ಚಿಂತಿಸುತ್ತಿದ್ದೆ. ಅದೇ ವಿಷಯ ಇಂದು ಮಾನವೀಯತೆಯನ್ನೆ ಹುಚ್ಚುಚ್ಚು ಮಾಡಿದೆ. ದಯವಿಟ್ಟು ಇದನ್ನು ಹೀಗೆ ಬಿಡದೆ ಪ್ರತೀಕಾರವೆಂಬ ಅಸ್ತ್ರವನ್ನು ಹೂಡಲೇಬೇಕು. ಸುಮ್ಮಗಿರಬಾರದು. ದಮ್ಮಯ್ಯ' ಎಂದು ಕಳಕಳಿಯನ್ನು ಹೊತ್ತು ಬಂದ ಅಂಚೆಕಾರ್ಡು ಮಂಗಳೂರಿನಿಂದ ಕೈಸೇರಿತ್ತು. ಹಿರಿಯ ಗುರು ಮಾಸ್ಟರ್ ವಿಠಲ್ ತಮ್ಮ ಅಸಹನೆ, ನೋವನ್ನು ಬಿಚ್ಚಿಟ್ಟದ್ದು ಹೀಗೆ.

'ತೀರಿಹೋದವರ ಕುರಿತಂತೆ ಆಡಿಕೊಳ್ಳಬಾರದು' ಎಂಬ ನಾಣ್ಣುಡಿಯನ್ವಯ ಚಿಂತನೆ ಮಾಡಹೊರಟರೆ ಈ ವಿಷಯದಲ್ಲಿ ಟೀಕೆಗಳನ್ನು ಮಾಡುವುದು ಸರಿಯಲ್ಲ ಎಂದೆನಿಸುವುದಿದೆ. ಅಷ್ಟಕ್ಕೂ ಇಲ್ಲಿ ಹುಸೇನರ ವ್ಯಕ್ತಿತ್ವವೋ ಅಥವಾ ಅವರ ಕುರಿತ ಶ್ರದ್ಧಾಂಜಲಿ ಲೇಖನಗಳೋ ನಮ್ಮ ಚರ್ಚೆಯ ವಿಷಯವೂ ಅಲ್ಲ. ಹಾಗಂತ ನಿಧನ ಹೊಂದಿದವು ಮನುಷ್ಯ ಸ್ವಭಾವದ ಸಹಜತೆಯನ್ನು ಹೇಳುವ ಬದಲು ವೃಥಾ ಹೊಗಳಿಕೆಗಳನ್ನು ಆರೋಪಿಸುವುದೂ ನಮ್ಮಲ್ಲಿನ ಸಂಸ್ಕಾರಹೀನತೆಯ ಲಕ್ಷಣವಲ್ಲವೇ? ಅದೂ ಕಲೆ–ಧರ್ಮ–ಮತಗಳ ಮೂಲಭೂತ ಧರ್ಮಗಳೆಡೆಗೇ ವಿವಾದಾಸ್ಪದ ವಿಷಯಗಳನ್ನು ಹುಟ್ಟುಹಾಕಿದವರ ಲೋಪಗಳಿಗೆ ತೇಪೆ ಹಾಕುವ, ಕಣ್ಣಿದ್ದೂ ಕುರುಡಾಗುವ, ಜಾಣಕಿವುಡನ್ನು ಪ್ರದರ್ಶಿಸುವ ನಿರ್ಲಕ್ಷ್ಯ ಯಾವ ಪುರುಷಾರ್ಥಕ್ಕೆ?

ಯಾವುದೇ ಕಲೆಯ ಗುರಿ ಲಿಂಗ–ಮತ–ಧರ್ಮಗಳಾಚೆಗಿನ ಒಂದು ಅದ್ಭುತ ರಸಾನುಭವ. ಅದನ್ನು ಪೂರೈಸದವರು ಎಷ್ಟೇ ದೊಡ್ಡ ಕಲಾವಿದರೇ ಆಗಿರಲಿ ಅವರು ಕಲೆ ಮತ್ತು ಕಲಾವಂತಿಕೆಯ ದೃಷ್ಟಿಯಿಂದ ಅನಿವಾರ್ಯವಲ್ಲ, ಅವರ ಅಗತ್ಯವೂ ಇಲ್ಲ. ಅದರಲ್ಲೂ ಮತ–ಧರ್ಮಗಳ ಪರಿಮಿತಿಯಲ್ಲಿ ಕಲೆಯನ್ನು ಕಟ್ಟಿ ಹಾಕುವುದೇ ಒಂದು ದೊಡ್ಡ ಮೂರ್ಖತನ. ಹೀಗಿರುವಾಗ ಮತ–ಧರ್ಮಗಳ ಅನುಷ್ಠಾನಕ್ಕೆ, ಮತ ಪ್ರಸಾರಕ್ಕೆ ಅಥವಾ ಪರಧರ್ಮ ನಿಂದೆಗೆ ಕಲೆಗಳನ್ನು ಬಳಸುವುದು ಕಲೆ ಮತ್ತು ಧರ್ಮದ ಹಿನ್ನಲೆಯಲ್ಲಿ ದೊಡ್ಡ ಅಪರಾಧವಷ್ಟೇ ಅಲ್ಲ; ಮಾನವೀಯತೆಗೆ ನೀಡುವ ಕೊಡಲಿಯೇಟು. ದುರಂತವೆಂದರೆ ಸಂಗೀತ ನೃತ್ಯಾದಿಗಳನ್ನೂ ಒಳಗೊಂಡಂತೆ ಚಿತ್ರಕಲೆ, ಶಿಲ್ಪಕಲೆ ಹೀಗೆ ಎಲ್ಲೆಡೆಯೂ 'ತಮ್ಮತನ'ದ ಅನಪೇಕ್ಷಿತ ವೈಭವೀಕರಣಕ್ಕೆ ಕಲೆಗಳನ್ನು ಅಸ್ತ್ರವನ್ನಾಗಿಸುವವರ ಸಂಖ್ಯೆ ಬಹಳ. ಅದಕ್ಕಿಂತಲೂ ಹೆಚ್ಚಾಗಿ ತಮಗೆ ಏನೇನೂ ಸಂಬಂಧವಿಲ್ಲವೆಂಬಂತೆ ಪ್ರಜ್ಞಾವಂತ ನಾಗರಿಕರೆನಿಸಿ ಕೊಂಡವರು ತೋರುವ ದಿವ್ಯ ನಿರ್ಲಕ್ಷ್ಯವು ಲಜ್ಜೆಗೇಡಿತನದ ಪರಮಾವಧಿ.

ಇಂತಹ ಪ್ರಯತ್ನಗಳ, ಅನುಭವಗಳ ಆಯುಷ್ಯ ಕ್ಷಣಿಕವೆಂಬುದು ವಿದಿತ. ನಿಜ, ಆದರೆ ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷವೆಂಬುದು ಇಂತಹ ಸಂದರ್ಭಗಳಲ್ಲಿ ವೇದ್ಯವಾಗುವುದು ಕೊಳ್ಳೆ ಹೊಡೆದ ನಂತರ ಕೋಟೆ ಬಾಗಿಲು ಹಾಕಿದಂತೆಯೇ ! ಕಲಾ ದುರುಪಯೋಗವು ಸರಿಪಡಿಸಲಾರದ ಕಂದಕವನ್ನು ಉಂಟುಮಾಡಿದ ಉದಾಹರಣೆಗಳು ನಮ್ಮ ಇತಿಹಾಸದಲ್ಲಿ ಎಷ್ಟಿಲ್ಲ ಹೇಳಿ? ಮತ್ತು ಅವೆಷ್ಟು ಬಗೆಯಲ್ಲಿ ತಿರುಚಲ್ಪಟ್ಟು ಶೈಕ್ಷಣಿಕ ಪಠ್ಯಗಳಲ್ಲೂ ತಿದ್ದಲಾರದ ಮಟ್ಟಿಗೆ ರೂಢಿಯಾಗಿಲ್ಲ? ಇದರಿಂದ ಧರ್ಮಕ್ಕೋ, ಕಲೆಗೋ ನಿರಂತರ ಚ್ಯುತಿ ಅಥವಾ ಹಾನಿಯಾಗುತ್ತಲೇ ಇತಿಹಾಸದ ಪುಟಗಳು ಶಾಪಗ್ರಸ್ಥವಾಗಿ, ವರ್ತಮಾನವೂ ಹೂತುಹೋಗುತ್ತಾ, ಭವಿಷ್ಯ ಪ್ರಶ್ನಾರ್ಥಕವಾಗಿ ಉಳಿಯತ್ತಿದೆ. ಜೊತೆಗೆ ಸಮಾಜದ ಸ್ವಾಸ್ಥ್ಯವೂ ಕೆಡುತ್ತಾ ಮತ್ತೆಂದೂ ನಮ್ಮ ಪುರಾತನರನ್ನು ದಿಟ್ಟಿಸದಿರುವಷ್ಟರ ಮಟ್ಟಿಗಿನ ಪೂರ್ವಾಗ್ರಹ ಆವರಿಸಿಕೊಳ್ಳುತ್ತಲಿದೆ.

ಪ್ರತಿಯೊಂದು ಕಲೆಗಳೂ ತನ್ನದೇ ಆದ ಪರಿಸರ, ನೈಜ ಅಭಿವ್ಯಕ್ತಿ, ಪ್ರೇಕ್ಷಕ ವರ್ಗ, ಬೆಳವಣಿಗೆಯ ನೆಲೆಗಳಿಂದ ಕಾಲ–ದೇಶ–ಜನಗಳನ್ನನುಸರಿಸಿ ವೈವಿಧ್ಯವನ್ನು ಪಡೆದಿರುತ್ತವೆ. ಹೀಗಿರುವಾಗ ಯಾವುದೇ ಕಲೆಯನ್ನು ತಮ್ಮ ಅಯಾಚಿತ ಪ್ರಸಿದ್ಧಿಯ ಹಂಬಲಕ್ಕೋ; ತಮ್ಮ ಜಾತಿ, ಮತ, ಧರ್ಮದ ಪಾರಮ್ಯವೇ ಹೆಚ್ಚು ಎಂಬುದನ್ನು ಸಾಧಿಸುವುದಕ್ಕೋ; ಒಂದಷ್ಟು ಮತಪ್ರಚಾರ ನಡೆಸಲಿಕ್ಕೋ ಅಥವಾ ತಂತಮ್ಮ ಹೆಚ್ಚುಗಾರಿಕೆ, ಪಟ್ಟಭದ್ರ ಹಿತಾಸಕ್ತಿಗೋ; ಸರ್ಕಾರದ ಅನುದಾನ, ಪ್ರಯೋಜನಗಳ ಲಾಭ ಗಿಟ್ಟಿಸಿಕೊಳ್ಳಲೋ ಮತ್ತೊಂದು ಧರ್ಮದವರನ್ನು ಹೀಗಳೆದು ಇಲ್ಲವೇ ಅಪರೋಕ್ಷವಾಗಿ ಹೀಯಾಳಿಸಿ, ಊಹಾಪೋಹಗಳನ್ನು ಸೃಷ್ಟಿಸಿ ಅಥವಾ ವೃಥಾ ವೈಭವೀಕರಿಸಿ, ಸಮಕಾಲೀನದ ಮುಖವಾಡ ತೊಟ್ಟು ಸಂಕರ ನಡೆಸುವವರ ಜಾಯಮಾನ ಇಂದು ನಿನ್ನೆಯದಲ್ಲ. ಈ ಮೂಲಕ ಉಳಿದವರ ಕೆಂಗಣ್ಣಿಗೆ ಗುರಿಯಾಗುವುದನ್ನೇ ಗುತ್ತಿಗೆ ತೆಗೆದುಕೊಂಡವರಂತೆ ಬದುಕುವವರು ; ವಿರೋಧಿಸುವ, ವಾದಿಸುವ ನೆಪದಲ್ಲಿ ತಮ್ಮ ಉದ್ದೇಶಿತಾರ್ಥ ನೆರವೇರಿಸಿಕೊಳ್ಳುವವರೂ ನಮ್ಮ ನಡುವಿನಲ್ಲಿ ಸಾಕಷ್ಟು ಮಂದಿ ಇದ್ದಾರೆ. ಒಂದರ್ಥದಲ್ಲಿ ಈ ಬಗೆಯ ಮನೋಧರ್ಮ ಉಳಿದವರಿಗಿಂತ ವಿಭಿನ್ನವಾಗಿರುವ ಚಟಕ್ಕೆ ಋಣಾತ್ಮಕವಾಗಿಯಾದರೂ ಪ್ರಸಿದ್ಧಿಯನ್ನು ಪಡೆಯಬೇಕು ಎಂಬ ವಿಕೃತ ಆನಂದವೇ ಆಗಿರುತ್ತದೆ.

ಗೆಳೆಯರೊಬ್ಬರ ನಿಕಟವರ್ತಿಗಳ ಅನುಭವದ ನೈಜ ಘಟನೆ. ಸಂಗೀತ ಕಾಲೇಜೊಂದರ ಪ್ರಾಂಶುಪಾಲರಾಗಿ ಆಯ್ಕೆಯಾದ ಅವರಿಗೆ ಕೆಲವೇ ದಿನಗಳಲ್ಲಿ ಎದುರಾದ ದೊಡ್ಡ ಆಘಾತ – 'ವಾತಾಪಿ ಗಣಪತಿಂ ಭಜೇ' ಕೀರ್ತನೆಯನ್ನು ಬೇರೊಂದು ಮತದ ದೇವರ ಹೆಸರನ್ನು ಹಾಕಿ ಅದೇ ಧಾಟಿಯಲ್ಲಿ ಹಾಡಿ, ಪಠ್ಯಕ್ರಮದಲ್ಲಿ ಸೇರಿಸಿ ಪ್ರಸಿದ್ಧಿಯಾಗಿಸಬೇಕೆಂಬ ಆಗ್ರಹಪೂರ್ವಕ ವಿನಂತಿ ! ಕೊನೆಗೆ ತಮ್ಮ ಆತ್ಮಸಾಕ್ಷಿಗೆ ದ್ರೋಹ ಬಗೆಯಲು ಮನಸ್ಸಿಲ್ಲದೆ ತಮ್ಮ ಕನಸಿನ ಹುದ್ದೆಗೆ ರಾಜೀನಾಮೆ ನೀಡಿ ವಾಪಾಸ್ಸಾದರಂತೆ ! ತಿಳಿದು ಬಂದ ಪ್ರಕರಣಗಳು ಕೆಲವು. ತಿಳಿಯದವು ಅದೆಷ್ಟೋ !

ಶತಶತಮಾನಗಳಿಂದಲೂ ನಮ್ಮ ಭರತಖಂಡದ ಮೇಲೆ ಅದೆಷ್ಟೋ ಆಕ್ರಮಣ, ಹಿಂಸೆ, ಅನಾಚಾರಗಳು, ಸನಾತನ ಪ್ರಜ್ಞೆಯ ಕುರಿತಂತೆ ಅಪಪ್ರಚಾರಗಳು ನಡೆಯುತ್ತಾ ಬಂದಿವೆ. ಆದರೂ ಇಲ್ಲಿನ ಯಾವ ಮಾದರಿಗೂ ಕುಟಿಲ ತಂತ್ರಾಲೋಚನೆಗಳು ಆದರ್ಶವಾಗಲೇ ಇಲ್ಲ. ಬದಲಾಗಿ ದಾಳಿ ಮಾಡಿದ ಎಲ್ಲಾ ಸಂಸ್ಕೃತಿಗಳಿಗೂ 'ಆನೋ ಭದ್ರಾಃ ಕ್ರತವೋ ಯಂತು ವಿಶ್ವತಃ' ಎನ್ನುತ್ತಲೇ ಸದಾಕಾಲವು ಸ್ವಾಗತಿಸುತ್ತಾ ಬಂದಿರುವ ಸಮೃದ್ಧ ರಾಷ್ಟ್ರ ನಮ್ಮದು. ಆದ್ದರಿಂದಲೇ ಮೊಗೆದಷ್ಟೂ ಬತ್ತದ ಅನಂತ ಸತ್ತ್ವ, ತತ್ತ್ವ, ಆಧಾತ್ಮ, ಜ್ಞಾನ ಸಾಗರದ ತವರಿಗೆ ಇಂದಿಗೂ ಅದೆಷ್ಟೋ ಸಹೃದಯಿ ವಿದೇಶಿಯರು ಆಕರ್ಷಿತರಾಗುತ್ತಲೇ ಇದ್ದಾರೆ. ಹಾಗಿದ್ದಾಗ ನಮ್ಮ ಸಂಸ್ಕೃತಿಗೆ ನಾವೇ ಮಸಿ ಬಳಿಯುವುದೂ ಒಂದೇ; ತೆಪ್ಪಗೆ ಇರುವುದೂ ಒಂದೇ !

ಕಲೆಯನ್ನೇ ಪ್ರಲೋಭನೆಗೆ, ಮಾರಾಟಕ್ಕೆ ಇಡುವ, ಸ್ವಹಿತಾಸಕ್ತಿಯ ಲೋಭಕ್ಕೆ ಬಳಸುವ ಕೀಳು, ಬೋಳು ವ್ಯಕ್ತಿತ್ವಗಳ ದಾಹಕ್ಕೆ ಕಲೆಗಳೂ ಪ್ರತೀಕವೆಂಬಂತೆಯೇ ಆಗಿಬಿಡುವ ಅಪಾಯ ನಿಧಾನವಾಗಿ ಗೋಚರಿಸುತ್ತದೆ. ಆದರೆ ಭೂತ, ವರ್ತಮಾನ, ಭವಿಷ್ಯ ಎಲ್ಲವೂ ಭ್ರಷ್ಟವಾಗುವ ವರೆಗೆ, ಅದರ ಇತಿಹಾಸವು ಹೆಪ್ಪುಗಟ್ಟುವ ತನಕ ಎಲ್ಲಾ ದಾರ್ಷ್ಟ್ಯ, ದೌರ್ಜನ್ಯಗಳಿಗೆ ನಮ್ಮ ಮೌನವೇ ಉತ್ತರವಾದರೆ ಅದು ಬಹಳಷ್ಟು ಸಲ 'ಸಮ್ಮತಿ ಲಕ್ಷಣ'ವೇ ಆಗಿ ಕರಾಳ ಅಧ್ಯಾಯದ ಸರಪಣಿಯೇ ನಮ್ಮನ್ನು ಹಿಂಬಾಲಿಸಬಹುದು. ಎಚ್ಚೆತ್ತುಕೊಳ್ಳುವ ವೇಳೆಗೆ ಕೈಮೀರಿ ಹೋಗ ಬಹುದು. ಶಿಕ್ಷಣ, ಆಧ್ಯಾತ್ಮ, ಕಲೆಗೆ ಅಂಟುವ ಕಳಂಕ ಎಂದೆಂದಿಗೂ ಮಾಸದ ಗಾಯವಾಗುತ್ತದೆ. ಎಚ್ಚರ !

ಪ್ರೀತಿಯಿಂದ,
**ಸಂಪಾದಕರು**

# ಲಲಿತ ಲಹರಿ

## ಅಷ್ಟನಾಯಿಕಾ ಚಿತ್ತವೃತ್ತಿ

### ವಿಪ್ರಲಬ್ಧಾ ನಾಯಿಕೆ

(ಕಳೆದ ಸಂಚಿಕೆಯಿಂದ ಮುಂದುವರೆದುದು...)

ದೂರಸ್ಥಳಕ್ಕೆ ಹೋದ ನಾಯಕನಿಗಾಗಿ ಕಾಯುತ್ತಾ ಪ್ರೋಷಿತಪತಿಕೆಯಾದ ನಾಯಿಕೆ, ಆತನು ಬರುವ ಸೂಚನೆ ದೊರೆತ ಕೂಡಲೇ ಸರ್ವಾಲಂಕಾರಭೂಷಿತೆಯಾಗುತ್ತಾ ವಾಸಕಸಜ್ಜೆಯಾಗುವಳು. ಆತನ ಆಗಮನ ತಡವಾದಷ್ಟೂ ನಿರೀಕ್ಷೆ ಉಲ್ಬಣಿಸಿ ಆತನು ಬರುವ ಸಂಕೇತಸ್ಥಳಕ್ಕೆ ತಾನೇ ತೆರಳಿ ಅಭಿಸಾರಿಕೆಯಾಗುವಳು. ಆದರೆ ನಾಯಕನು ನಾಯಕಿಗೆ ನೀಡಿದ ವಾಗ್ದಾನದಂತೆ ಸಂಕೇತಸ್ಥಳಕ್ಕೆ ಬರದೆ ಕಾಯಿಸುವುದರಿಂದಾಗಿ ಆಕೆಗೆ ತಾನು ವಂಚಿತೆಯೆಂಬಂತಾಗಿ ಕ್ರೋಧಿತಳಾಗುತ್ತಾಳೆ. ಬೇಸರ, ದುಃಖ, ಅವಮಾನ, ರೋಧನೆ, ವ್ಯಥೆ, ನಿಟ್ಟುಸಿರು, ನಿರಾಶೆ, ಬಳಲಿಕೆ, ಕಣ್ಣೀರು, ಆತಂಕ, ವಿನಾಕಾರಣ ಭೀತಿ–ಯೋಚನೆ, ಖಿನ್ನತೆ, ಅಸಮಾಧಾನ ಆಕೆಯನ್ನು ಆವರಿಸುತ್ತದೆ. ಈಕೆಯೇ ವಿಪ್ರಲಬ್ಧೆ. ಒಂದೋ ಈಕೆಯು ನಾಯಕನಿಂದ ವಂಚಿತಳಾದ ಭಾವವನ್ನೂ ಹೊಂದಿರಬಹುದು; ಇಲ್ಲವೇ ಸಖಿಯಿಂದ ಮೋಸಹೋದೆನೆಂದೂ ಖಿನ್ನಳಾಗಬಹುದು.

ಈ ನಾಯಿಕೆಯಲ್ಲೂ ಉತ್ತಮ, ಮಧ್ಯಮ, ಅಧಮ ಅಥವಾ ಸ್ವೀಯಾ, ಪರಕೀಯ, ಸಾಮಾನ್ಯವೆಂಬ ಬೇಧಗಳಿದ್ದು ಅದು ಈಕೆಯ ಅವಸ್ಥೆಗಳನ್ನು ಅವಲಂಬಿಸಿರುತ್ತದೆ. ಸಹಜವಾಗಿ ಉತ್ತಮ ನಾಯಿಕೆಯದ್ದು ಹೆಚ್ಚೇನೂ ಅಭಿನಯಕ್ಕೆ ಅವಕಾಶ ನೀಡದ ಆದರೆ; ಉನ್ನತ ಮಟ್ಟದ, ಗಂಭೀರ, ಮೃದು ವರ್ತನೆಯುಳ್ಳ ಭಾವಪ್ರಕಾಶ. ಮಧ್ಯಮವು ಮನುಷ್ಯ ಸಹಜ ಮಿಶ್ರ ಭಾವನೆಗಳ ಪ್ರತಿರೂಪ. ಅಧಮನಾಯಿಕೆಯು ನೀಚ ಇಲ್ಲವೇ ಭಾವನೆಯನ್ನು ಹಿಡಿತವಿರಿಸದೆ ಯಥಾಸ್ಥಿತಿಯಲ್ಲಿ ಹರಿಬಿಡುವ, ಅಥವಾ ಗೌರವಯುತ ನಡವಳಿಕೆಗಳ ಬದಲಾಗಿ ಎಂದಿನಂತೆಯೇ ಇದ್ದು ; ಅನೌಚಿತ್ಯಕರವಾಗಿ ಕಾಣಿಸಿಕೊಳ್ಳುವವಳು. ಉತ್ತಮ ವಿಪ್ರಲಬ್ಧೆ ನಾಯಕಿಯು ತನ್ನ ಪ್ರಿಯತಮನು ಬೇರೊಬ್ಬ ಯುವತಿಯನ್ನು ಕೂಡಿದ ವಿಷಯ ತಿಳಿಯದೇ ಆತಂಕ ಹೊಂದುತ್ತಾಳೆ. ಮಧ್ಯಮ ಮತ್ತು ಅಧಮ ವಿಪ್ರಲಬ್ಧೆಯರು ತನ್ನ ಪ್ರೇಮಿ ಬೇರೆಯವರ ಸಹವಾಸದಿಂದ ತನ್ನನ್ನು ಮೋಸಗೊಳಿಸಿದನೆಂದು ತಿಳಿಯುತ್ತಾರೆ.

ಸ್ವೀಯಾ ಅಂದರೆ ಪತಿಗೆ ನಿಷ್ಠಳಾದ ಪತ್ನಿ. ಪರಕೀಯಳು ಪತಿಯ ಹೊರತಾಗಿಯೂ ಇನ್ನೊಬ್ಬರಲ್ಲಿ ಅನುರಾಗ ಹೊಂದಿರುವವಳು, ಸಾಮಾನ್ಯೆಯು ವೇಶ್ಯೆಯೇ ಆಗಿರುತ್ತಾಳೆ. ಇಷ್ಟೇ ಅಲ್ಲದೆ ಅಷ್ಟವಿಧ ನಾಯಿಕೆ ಅಥವಾ ಮೇಲ್ಕಂಡ ಮೂವರು ಶೃಂಗಾರ ನಾಯಿಕೆಯರು ಮುಗ್ಧಾ, ಮಧ್ಯಾ ಮತ್ತು ಪ್ರಗಲ್ಭ ಸ್ಥಿತಿಯ ಪೈಕಿ ಯಾವುದಾದರೂ ಒಂದು ವರ್ಗಕ್ಕೆ ಸೇರಿರುವುದೂ ಇದೆ. ಮುಗ್ಧಾ ನಾಯಿಕೆಯು ಮುಗ್ಧೆ, ಬಾಲ್ಯ ಯೌವನಗಳ ಸಂಧಿಕಾಲದಲ್ಲಿರುವವಳು. ಲಜ್ಜೆಯ ವರ್ತನೆ, ಅನುರಾಗದ ಕುರಿತಾಗಿ ಅಷ್ಟೇನೂ ಅರಿವಿಲ್ಲದ ಮೃದು ಸ್ವಭಾವದವಳಾಗಿರುತ್ತಾಳೆ. ಆಕೆಗೆ ಎಲ್ಲವೂ ಹೊಸತು, ಮೊದಲು. ಮಧ್ಯಾ ನಾಯಿಕೆಯು ಮುಗ್ಧಾಳಿಗಿಂತ ಕೊಂಚ ಹೆಚ್ಚಾದ ಅರಿವಿರುವ ಯೌವನಾವಸ್ಥೆ ವ್ಯಾಪಿಸಿರುವವಳು. ಹೆಚ್ಚು ಲಜ್ಜೆ ಮತ್ತು ಕಾಮವಿಕಾರವುಳ್ಳ ಈಕೆಯದ್ದು ಚಾತುರ್ಯಭರಿತ ವರ್ತನೆ. ಪ್ರಗಲ್ಭೆಗೆ ಕಾಮಾಸಕ್ತಿ ಹೆಚ್ಚು, ರತಿಕ್ರೀಡೆಗಳಲ್ಲಿ ಪ್ರವೀಣಳು. ಲಜ್ಜೆ ಅತೀ ಕಡಿಮೆ. ಇವುಗಳೊಳಗೂ ಧೀರ, ಅಧೀರ, ಧೀರಾಧೀರ ಹಾಗೂ ಜ್ಞಾತ, ಅಜ್ಞಾತ, ಪ್ರೌಢ, ನವೋಢ, ಲಘು, ಗುರುವೆಂಬ ಹಲವಾರು ಬೇಧಗಳಿವೆ.

ಇಲ್ಲಿ ನೀಡಲಾಗಿರುವ ಶತಾವಧಾನಿ ಡಾ. ಗಣೇಶರ ಕಾವ್ಯ ಮತ್ತು ಮಂಟಪರ ಭಾವಾಭಿವ್ಯಕ್ತಿಯಲ್ಲಿ ನೀಡಲಾಗಿರುವ ನಾಯಿಕೆಯು ಉತ್ತಮ–ಮಧ್ಯಮ ಗುಣವುಳ್ಳ; ಸ್ವೀಯಾ, ಮಧ್ಯಾ, ಜ್ಞಾತ, ಪ್ರೌಢ ಸ್ವಭಾವವುಳ್ಳವಳಾಗಿದ್ದು; ನರ್ತನದಲ್ಲಿ ಅಭಿನಯಕ್ಕೆ ಹೆಚ್ಚು ವಿಸ್ತಾರವನ್ನು ಕಲ್ಪಿಸಿಕೊಡುವ ಮತ್ತು ಮಾದರಿಯ ಜೀವನದ ಆಯಾಮವಿರುವುದರಿಂದ; ಈ ಅಷ್ಟನಾಯಿಕಾ ಚಿತ್ತವೃತ್ತಿಯ ಹಾದಿಯಲ್ಲಿ ಮಧ್ಯಮನಾಯಿಕೆಯನ್ನೇ ಪ್ರಧಾನವಾಗಿ ಎಲ್ಲಾ ನಾಯಿಕೆಯರಿಗೂ ಅಳವಡಿಸಿ ಸಾಹಿತ್ಯವನ್ನು ನೀಡಲಾಗಿದೆ. ಧಾರವಾಡ ಆಕಾಶವಾಣಿಯ ಉದ್ಯೋಗಿ, ಕವಿ, ಯಕ್ಷಗಾನ ಅರ್ಥಧಾರಿ ದಿವಾಕರ ಹೆಗಡೆಯವರ ಕವಿತ್ವವು ಭೂಮಿ, ಪ್ರಕೃತಿ, ಮಳೆ, ಬಾನು ಇತ್ಯಾದಿ ಪ್ರಾಕೃತಿಕವಾಗಿ ನಿರೂಪಿಸಲ್ಪಟ್ಟ ಸೆಲೆಯನ್ನು ಹೊಂದಿದೆ. ಶರದ್ ಋತುವಿನಿಂದಾರಂಭಿಸಿ ಗ್ರೀಷ್ಮ ಋತುವಿನವರೆಗೆ ಭೂಮಿಯ ಮೇಲ್ಮೈಯಲ್ಲಾಗುವ ಬದಲಾವಣೆಗಳನ್ನೇ ನಾಯಿಕೆಯ ಅವಸ್ಥೆಗಳನ್ನಾಗಿಸಿ ಚಿತ್ರಿಸುವ ಕಾವ್ಯದಲ್ಲಿ 'ಮೇದಿನಿ' ಅಷ್ಟನಾಯಿಕಾ ಭಾವದಲ್ಲಿ ಮೇಘನಿಗಾಗಿ ಕಾಯುತ್ತಾಳೆ. ಭಾವಕ್ಕೆ ಒತ್ತಾಸೆಯಾಗಿ ನಿಲ್ಲುವ ಲಯಲಾಲಿತ್ಯ ಕಾವ್ಯಕ್ಕೆ ಹದ ನೀಡುವ ಪದಮೈತ್ರಿ ಇದರ ವಿಶೇಷ.

ಬನ್ನಿ, ನಮ್ಮ ಕಲ್ಪನಾ ಸಾಮರ್ಥ್ಯ, ಅನುಭವ–ಅನುಭಾವ, ವಿಶ್ಲೇಷಣೆ, ನಾಟ್ಯದ ಆಯಾಮ, ಸವಾಲು–ಸಾಧನ, ಅಭಿವ್ಯಕ್ತಿಯ ಕ್ಷಿತಿಜ, ರಸದೃಷ್ಟಿ, ಕಾವ್ಯದೃಷ್ಟಿ ಮತ್ತು ಅರಿವಿನ ಹರಹುವಿನ ವಿಸ್ತಾರದಲ್ಲಿ ಕೈಜೋಡಿಸೋಣ. ನಿಮ್ಮ ಕಲ್ಪನೆ–ಚಿಂತನೆಗಳಿಗೆ ಇದು ಮುಕ್ತ ವೇದಿಕೆಯಾಗಲಿ.

ಅಂದಹಾಗೆ ಆಕಾಶವಾಣಿಯ ವಾರ್ಷಿಕ ರಾಷ್ಟ್ರೀಯ ಸ್ಪರ್ಧೆಯಲ್ಲಿ ' ಮೇಘ ಮೇದಿನಿ' ರಾಷ್ಟ್ರೀಯ ಪ್ರಶಂಸೆ ಗಳಿಸಿರುವುದು ನಿಜಕ್ಕೂ ಒಂದು ಹೆಮ್ಮೆಯ ವಿಷಯ. ಈ ಕಾವ್ಯಕ್ಕೆ ರಸಾರ್ದ್ರ ಸಂಗೀತ ಸಂಯೋಜನೆ ಮಾಡಿದವರು ಪ್ರಸಿದ್ಧ ಹಾಡುಗಾರ ಶ್ರೀಪಾದ ಹೆಗಡೆ ಕಂಪ್ಲಿ. ಶ್ರೀಪಾದ ಹೆಗಡೆಯವರೊಂದಿಗೆ ಹಾಡಿಗೆ ದನಿಗೂಡಿಸಿದವರು ರೇಖಾ ಭಟ್ ಕೋಟೆಮನೆ, ರೇಖಾ ದಿನೇಶ ಹೆಗಡೆ ಶಿರಸಿ. ಸ್ಪರ್ಧೆಗಾಗಿ ಮೇಘ ಮೇದಿನಿಯನ್ನು ಹಿಂದಿಗೆ ಅನುವಾದಿಸಿದವರು ಡಾ. ಧರಣೇಂದ್ರ ಕುರಕುರಿ. ಎಲ್ಲರಿಗೂ ಅಭಿನಂದನೆಗಳು.

## ಮೇಘಮೇದಿನಿ

ಇನ್ನು ನಾ ನಿಲಲಾರೆನು । ಬಲ್ಲಿದನಾತ । ಒಲ್ಲೆನೆಂಬನೆ ಎನ್ನನು ॥
ಚೆನ್ನ ಕೋಗಿಲೆ ಹಾಡು ಮುನ್ನ ಕೇಳುವುದೀಗ ।
ಎನ್ನ ಮನದನ್ನನನಿನ್ನೆಷ್ಟು ಕಾಯಲಿ ॥



ಕಂದರ್ಪ ಕಾಲವೀಗ । ವಸಂತನು । ಬಂದಿರ್ಪನೇಕೆ ಬೇಗ ॥
ಮುಂದಿರ್ಪ ಮಳೆಗಾಲಕೇಕಿಷ್ಟು ಕಾತರ ।
ಇಂದಿರ್ಪ ಸೊಗವ ನಾನೇನೆಂದು ಹೇಳಲಿ ॥

– ದಿವಾಕರ ಹೆಗಡೆ, ಧಾರವಾಡ

# ಭಾಮಿನೀ

– ಶತಾವಧಾನಿ ಡಾ. ಆರ್. ಗಣೇಶ್

**ಆನಂದಭೈರವಿ : ಶಾರ್ದೂಲವಿಕ್ರೀಡಿತ**

ಸಂಕೇತಸ್ಥಳದೊಳ್ ನಿಶೀಥಮುಖದೊಳ್ ನಿಷ್ಪಂದದೇಕಾಂತದೊಳ್
ಪಂಕೇಜವ್ರಜದಂತೆ ಕಂದಿರೆ ಮೊಗಂ ರಾಕೇಂದುಸಂದೀಪ್ತಿಯೊಳ್ ।
ಸಂಕಲ್ಪಂ ಸಟೆಯಾಗೆ ಕಲ್ಪನೆಗಳುಂ ಕಾಳಾಗೆ ತಾನಾದಳೀ
ಶಂಕಾತಂಕತರಂಗರಿಂಗಣೆ ಮಲಂ ಮೇಣ್ ವಿಪ್ರಲಬ್ಧೆ ಸ್ವಯಂ ॥

(ಇನಿಯನಿಗಾಗಿ ಎದುರುನೋಡಿ ನಿರಾಶಳಾದ ನಾಯಿಕೆಯು ಸಂಜೆಯು ಬಲಿತು ಕತ್ತಲಾಗಿ ಒಂಟಿತನ ವೆಂಟಣಿಸಿದಂತೆಯೇ ಕಳವಳಿಸಿ ವಿಪ್ರಲಬ್ಧೆಯೆನಿಸುತ್ತಾಳೆ.)

**ಹಿಂದೋಳ : ಏಕ, ರೂಪಕ ತಾಳಗಳು**

ಇಲ್ಲಿಗೆ ಬಾರೆನೆಂದು ಸೊಲ್ಲಿಸಿದವನೆಲ್ಲಿ?
ನಲ್ಲೆಯನೇಂ ತೊರೆದನೇ? ಪ್ರಫುಲ್ಲನು ॥ಪ॥

ಮನೆಯನೆಂತೋ ಮರೆತು ಬಂದೆ
ಜನರನೆಂತೋ ಜಯಿಸಿ ಬಂದೆ ।
ಮನವನೆಂತೋ ಮಥಿಸಿ ಬಂದೊಡ
ಮಿನಿಯನೇಕೆ ಕಾಣಲೊಲ್ಲಂ ? ॥

ಮಾತನಿತ್ತು ಮರೆಸಿದವನು
ದೂತನಿಂದ ತಿಳಿಸಿದವನು ।
ಏತಕಿಂತು ಸುಳಿಯದಾದಂ ?
ಸೋತನೇ ಮತ್ತಾರಿಗೀತಂ ॥

ಹೊತ್ತು ಮುಳುಗಿ ಮೀರುತಿಹುದು
ಚಿತ್ತಸೌಖ್ಯವೊ ಜಾರುತಿಹುದು ।
ಎತ್ತ ಪೋಪೆನೊ ಹಾ ! ಹತಾಶೆ
ಎತ್ತಲಾಪೆನೊ ಮೊಗವನಿನ್ನು ॥

# ಭಾಮಿನಿಯ ಭಾವಾಭಿವ್ಯಕ್ತಿ

**– ಮಂಟಪ ಪ್ರಭಾಕರ ಉಪಾಧ್ಯ**

...ಕ್ಷಣಕ್ಷಣಕ್ಕೂ ನನ್ನವನ ನಿರೀಕ್ಷೆಯಿಂದ ಹತಾಶಳಾಗುತ್ತಾ ನನ್ನ ಮುಖದ ಪ್ರಸನ್ನತೆ–ಕಾತರತೆ ಕಡಿಮೆ ಆಗುತ್ತಿತ್ತು. ಬಂದು ಎಷ್ಟು ಹೊತ್ತಾಯ್ತು. ಇದುವರೆಗೆ ಇಲ್ಲದ ಸಮಯದ ಕಾಳಜಿ ಇದೀಗ ನನ್ನನ್ನು ಕ್ಷಣ ಕ್ಷಣವೂ ದೀರ್ಘವಾಗಿ ಕಾಡಿತು. ಕೊಳದಲ್ಲಿಯ ತಾವರೆಗಳು ಮುದುಡಿದ್ದವು. ಹಕ್ಕಿಗಳೆಲ್ಲ ಕಲರವ ನಿಲ್ಲಿಸಿದ್ದವು. ಎಲ್ಲವೂ ಗೂಡು ಸೇರಿದ್ದವು. ಅನಾಥಳಂತೆ ನಾನು ಗೂಡು ಬಿಟ್ಟಿದ್ದೆ. ಈಗಾಗಲೇ ನನ್ನವನ ಹೃದಯವೆಂಬ ಗೂಡನ್ನು ಸೇರಬೇಕಿತ್ತು. ಪ್ರಕೃತಿಯಲ್ಲಿ ಎಲ್ಲ ಜೀವಿಗಳು ಸಮಯವನ್ನು ಪಾಲಿಸಿದ್ದವು. ನನ್ನವನಿಗೆ ಮಾತ್ರ ಸಮಯಪಾಲನೆ ತಿಳಿದಿಲ್ಲ. ಜೊತೆಗೆ ನನ್ನ ಸಮಯವೂ ಅಸ್ತವ್ಯಸ್ತ. ನನ್ನ ಆತಂಕ ಹೆಚ್ಚುತ್ತಿತ್ತು. ಈ ನೀರವ ನಿರ್ಜನ ಪ್ರದೇಶದಲ್ಲಿ ನನ್ನವನು ಇದ್ದಿದ್ದರೆ ಬೆಳಗಿನತನಕ ಇರಬಹುದಿತ್ತು. ಆದರೆ ಈಗ ಆ ನಂಬಿಕೆಯೇ ನಂಬಿಕೆಯನ್ನು ಕಳೆದುಕೊಂಡಿದೆ. ಹೂಬಾಣಗಳಂತಿದ್ದ ನನ್ನ ಪ್ರೀತಿ ಕೋಪದ ವಿಷವನ್ನು ಸವರಿಕೊಂಡು ನಿಂತಿತ್ತು.

ಅವನಿಗಾಗಿ ನಾನೆಷ್ಟು ರೀತಿಯಲ್ಲಿ ಶೃಂಗರಿಸಿಕೊಂಡಿದ್ದೆ. ಶೃಂಗಾರಕ್ಕೆ ಒಂದು ಶಾಸ್ತ್ರ ಬರೆಯುವಷ್ಟು ಯೋಚಿಸಿದವಳು ನಾನು. ನನ್ನ ಮನಸ್ಸಿನ ಅದೆಷ್ಟು ಭಾವನೆಗಳನ್ನು ಬದಲಿಸಿಕೊಂಡಿದ್ದೆ. ನನ್ನ ತ್ಯಾಗಕ್ಕೆ ಅರ್ಥವೇ ಇಲ್ಲವಾಯ್ತು. ಈತನನ್ನು ಕಾಣಲು ಮನೆಯ ಕೆಲಸಗಳನ್ನು ಅದೆಷ್ಟು ವೇಗದಲ್ಲಿ ಮಾಡಿ ಮುಗಿಸಿದ್ದೆ. ಆತುರದಲ್ಲಿ ಮಾಡದೇ ಬಂದಿದ್ದೆ. ರುಬ್ಬುವಾಗ ಕೈ ಜಜ್ಜಿಕೊಂಡಿದ್ದೆ. ಅಕ್ಕಿ ಕುಟ್ಟುವಾಗ ಕಾಲ ಮೇಲೆ ಒನಕೆ ಬೀಳಿಸಿಕೊಂಡಿದ್ದೆ. ದಾರಿಯಲ್ಲಂತೂ ಎಲ್ಲರಿಗೂ ಉತ್ತರ ಹೇಳಬೇಕಾದರೆ ನನ್ನ ಅರ್ಧ ಜೀವವೇ ಹೋಗಿತ್ತು. ಇದೆಲ್ಲ ಅವನಿಗೆ ತಿಳಿಯುವುದೆಂತು? ಪ್ರೀತಿಸುವುದು ತಪ್ಪೇ? ನನ್ನ ಪಾಲಿಗಂತೂ ತಪ್ಪೆಂದು ಸಾಬೀತಾಯಿತು. ಅವನ ಯಾವ ಪ್ರಣಯಗಳೂ ನನ್ನನ್ನು ತಟ್ಟಲಾರದು. ನನ್ನ ಪ್ರೀತಿಗೆ ಬೆಲೆ ಸಿಗದ ಮೆಲೆ ಆತನ ಪ್ರೀತಿಗೆ ಸ್ಪಂದಿಸಲಾರೆ. ಯಾಕೆ ಸ್ಪಂದಿಸಬೇಕೆಂಬ ತರ್ಕ ನನ್ನದು. ಈ



ಸಿಟ್ಟೆಲ್ಲ ಯಾರ ಮೇಲೆ? ಅವನಂತೂ ಇಲ್ಲಿಲ್ಲ. ಕೇವಲ ನನ್ನ ಸಮಾಧಾನಕ್ಕೆ. ಅಸಮಾಧಾನಕ್ಕೆ ಸಿಟ್ಟೇ ಮದ್ದಾಯ್ತು ನನ್ನ ಪಾಲಿಗೆ. ಆತ ಬಂದರೆಷ್ಟು ಬಾರದಿದ್ದರೆಷ್ಟು? ನನಗೋ ಆತ್ಮಗೌರವ ಎದುರಾಯ್ತು. ನಾನು ನಡೆಸಿದ ಹುಚ್ಚಾಟಗಳನ್ನು ನನ್ನ ಆತ್ಮಗೌರವದ ಎದುರು ಅಡ ಇಡಲು ಇಷ್ಟಪಡಲಿಲ್ಲ. ನಿಧಾನವಾಗಿ ಹಿಂದೆ ಹೆಜ್ಜೆ ಇಡಲಾರಂಭಿಸಿದೆ.

ಮಳೆ ನಿಂತ ಕಾರಣ ಕೆಲ ಜನರು ಓಡಾಟ ಆರಂಭಿಸಿದರು. ಅವರಲ್ಲಿ ಕೆಲವರು ನನ್ನನ್ನು ಆಗ ಪ್ರಶ್ನಿಸಿದವರೂ ಇದ್ದಿದ್ದರು. ಉದ್ಧಟತನದಿಂದ, 'ಅಹಂ'ನಿಂದ ಉತ್ತರಿಸಿದ ನನಗೆ ಈಗ ಅವರೆಲ್ಲಾ ತುಂಬಾ ಅನುಭವಿಗಳಂತೆ ಕಂಡರು. ಬದುಕಿನ ಸತ್ಯವನ್ನು ಅರಿತು ಅನುಭವಿಸಿದವರಂತೆ ಕಂಡರು. ನಾನು ನನ್ನ ಒಳಗೇ ನಾಚಿಕೊಂಡು ತಲೆ ತಗ್ಗಿಸಿದೆ. ದೇವರೇ ಅವರ್ಯಾರೂ ಪುನಃ ನನ್ನನ್ನು ಕಾಣದಿರಲಿ, ಮಾತನಾಡಿಸದಿರಲಿ ಎಂದು ಹರಕೆ ಹೊತ್ತೆ. ಉತ್ತರಿಸಲು–ಎದುರಿಸುವ ಶಕ್ತಿಯನ್ನೇ ಕಳಕೊಂಡಿದ್ದೆ. ಆದರೂ ಮಸುಕು ಬೆಳಕಿನಲ್ಲಿ ನನ್ನ ಗುರುತು ಸಿಗದಿರಲಿ ಎಂದು ತಲೆತಗ್ಗಿಸಿ ಸೆರಗನ್ನು ಮುಚ್ಚಿ ನಿಧಾನ ನಡಿಗೆಯಿಂದ ಮನೆಯ ಕಡೆ ಹೊರಟೆ. ಅವನನ್ನು ಶಪಿಸುತ್ತಾ ದುಃಖಿಸುತ್ತಾ, ನಾನಿಟ್ಟ ಹಜ್ಜೆಗಳೋ ಒಂದೊಂದು ಹಜ್ಜೆಯೂ ನನ್ನನ್ನು ಚುಚ್ಚುತ್ತಿದ್ದವು. ನೀನು ಇಡುತ್ತಿರುವ ಹಜ್ಜೆಗಳು ತಪ್ಪು ಎಂದು ಅಣಕಿಸುತ್ತಿದ್ದವು. ಆದರೂ ನಾನು ಸರಿಯಾಗಿಯೇ ಇದ್ದೇನೆಂಬ ಭಾವನೆಯಿಂದ ಒತ್ತಿ ಒತ್ತಿ ಹಜ್ಜೆ ಇಟ್ಟಾಗ ಕಲ್ಲುಮಣ್ಣುಗಳು ಮುಳ್ಳುಗಳು ತಾಗಿ ನೋವುಗಳನ್ನೇ ಅನುಭವಿಸುತ್ತಿದ್ದೆ. ನನ್ನನ್ನು ಅಳುವಂತೆ ಅವುಗಳು ಪ್ರಯತ್ನಿಸುತ್ತಿದ್ದವು. ನನ್ನ ಹೃದಯಕ್ಕೆ ಆದ ನೋವಿನ ಎದುರು ಇವೆಲ್ಲಾ ಯಾವ ಲೆಕ್ಕ ಎಂದು ನನ್ನನ್ನು ನಾನೇ ಸಮಾಧಾನಪಡಿಸಿಕೊಳ್ಳುತ್ತಿದ್ದೆ. ಏನು ಮಾಡಿದರೂ ಮನೆಯೇ ಬರುತ್ತಿಲ್ಲ. ಮನೆಯ ಆಕರ್ಷಣೆಯೂ ನನಗಿಲ್ಲ. ಹಾಗಿದ್ದರೆ ಮನೆಕಡೆಗೆ ಯಾಕೆ? ಅದು ಗೊತ್ತಿಲ್ಲ. ಇಲ್ಲ. ನನಗೆ ಏನೂ ಗೊತ್ತಿಲ್ಲ; ಅಥವಾ ಗೊತ್ತಿರುವುದು ಹೆಚ್ಚಾಯ್ತು. ಪ್ರಪಂಚವೇ ನನ್ನನ್ನು ಮೋಸಗೊಳಿಸುತ್ತಿದೆ ಎಂದೆನಿಸಿತು. ನಾನೊಬ್ಬಳು ತಬ್ಬಲಿಯಂತೆ, ಮಗುವಿನಂತೆ, ಅನಾಥಳಂತೆ, ಸೋತವಳಂತೆ–ಇನ್ನೋ ಏನೇನೋ ಅನಿಸಿ ಆಯಾಸಗೊಂಡು, ಏನೂ ಕಾಣದೆ ಕಣ್ಣುಕತ್ತಲಾಗಿ ಕುಳಿತೆ. ಚಡಪಡಿಸುತ್ತಲೇ ಮುಂದೇನು ಎಂದು ಆತಂಕಪಟ್ಟೆ

ಕಾಂತನ ಮೇಲಿನ ನಿರೀಕ್ಷೆ ಹುಸಿಯಾಯ್ತು. ಸುತ್ತಲೂ ಕತ್ತಲು, ನೀರವತೆ, ನಿಶ್ಶಬ್ದ. ಆದರೆ ನನ್ನ ಹೃದಯದಲ್ಲಿ ಉಲ್ಲೋಲಕಲ್ಲೋಲ–ಭೂಕಂಪ. ಮಳೆಯ ಸಿಡಿಲಿಗಿಂತ ಜೋರಾಗಿ ಹೃದಯದ ಬಡಿತದ ಶಬ್ದ ಕರ್ಕಶವಾಗಿತ್ತು. ಮೈಮೇಲೆ ಬಿದ್ದ ಮಳೆಯ ಹನಿಗಳು ಕೊತಕೊತನೆ ಕುದಿದ ಬಿಸಿನೀರಿನ ಹನಿಗಳಂತೆ ಸುಡುತ್ತಿದ್ದವು. ತಂಪಾದ ಗಾಳಿಯೂ ನನಗೆ ಬೆವರು ಸುರಿಯುವಂತೆ ಮಾಡುತ್ತಿತ್ತು. ಹಕ್ಕಿಗಳು ನಾದಪೂರ್ಣ ಚಿಲಿಪಿಲಿಯಿಂದ ನನ್ನನ್ನು ನೋಡಿ ಗೇಲಿಮಾಡುವಂತೆ ಕಂಡಿತು. ಕತ್ತಲು ನನ್ನ ಕಣ್ಣುಗಳನ್ನು ಸೇರಿ ಕುರುಡಿಯಾದೆ. ಕುರುಡಿಯಾದ ನಾನು ಹೊರಗಿನ ಯೋಚನೆಯಿಂದ ಒಳಗೆ ಯೋಚಿಸಲು ಪ್ರಾರಂಭಿಸಿದೆ.

ನನ್ನವನ ಮೇಲಿನ ಪ್ರೀತಿ ಬರಡಾಗಿ ನಿರಾಸೆಯುಂತಾಗಿ ಉದ್ವಿಗ್ನತೆ ನಿಂತು ನನ್ನ ಬಗ್ಗೆಯೇ ಸಂಶಯ ಮೂಡಿತು. ಇದುವರೆಗೆ ನಡೆದಿರುವುದೆಲ್ಲಾ ಸತ್ಯವೇ? ಹಾಗೆಯೇ ನನ್ನವನ ಪ್ರೀತಿಯ ಬಗ್ಗೆ ಸಂಶಯ. ಹಾಗೆಯೇ ಇನ್ಯಾರೋ ನನ್ನವನ ಹಾದಿ ತಪ್ಪಿಸಿರಬಹುದೇ?–ಹೀಗೆ ಎಲ್ಲಾ ರೀತಿಯಿಂದ ಪ್ರಶ್ನಿಸಿದಾಗ ಸಂಶಯಗಳ ಸುಳಿಯಲ್ಲಿ ಕೊಚ್ಚಿಹೋದೆ. ನಾನು ಅನುಭವಿಸಿದ ಅನುಭವಗಳು ಅವು ಸತ್ಯವೆಂದು ಗಂಟೆ ಬಾರಿಸಿದವು. ಆತನ ಮೇಲಿನ ಸಂಶಯವನ್ನು ದೂರಮಾಡಿಕೊಳ್ಳಲು ಆತನನ್ನು ಮನಸ್ಸಿನಲ್ಲೇ ಕಷ್ಟದಲ್ಲಿ ಕುಳ್ಳಿರಿಸಿ ಜಗ್ಗಾಡಿದೆ. ಏನು ಮಾಡಿದರೂ ನನಗಾದ ಕಹಿ ಅನುಭವದ ಸತ್ಯವನ್ನು ಬಿಟ್ಟುಕೊಡಲಾಗಲಿಲ್ಲ...

f



ತ್ರಿಶೂಲ ಹಸ್ತ

# ಹಸ್ತ ಮಯೂರಿ

**ಲಕ್ಷಣ:** ಹೆಬ್ಬೆರಳು ಮತ್ತು ಕಿರುಬೆರಳನ್ನು ಮಡಿಸಿ ಕೂಡಿಸಿ ಮಧ್ಯದ ಮೂರು ಬೆರಳನ್ನು ನೀಡಿದರೆ ತ್ರಿಶೂಲಹಸ್ತ ತ್ರಿಶೂಲ ಎಂದರೆ ಈಶ್ವರನ ಆಯುಧ ಈ ಹಸ್ತವನ್ನು ಬಾಲರಾಮ ಭರತವೆಂಬ ಗ್ರಂಥದಲ್ಲಿ ಪುರೋನ್ನತ ಅಥವಾ ಪುರಾಣೋನ್ನತ ಹಸ್ತ ಎಂದು ಕರೆಯಲಾಗಿದೆ. ನಾಟ್ಯಶಾಸ್ತ್ರವನ್ನೂ ಒಳಗೊಂಡಂತೆ ಬೇರೆ ಯಾವ ಲಕ್ಷಣಗ್ರಂಥಗಳಲ್ಲಿ ಈ ಹೆಸರಿನ ಹಸ್ತವಿಲ್ಲ. ಈ ಹಸ್ತಕ್ಕೆ ಜನ್ಮ, ವರ್ಣ, ಋಷಿ ಇತ್ಯಾದಿಗಳ ಪ್ರಸ್ತಾಪ ಕಂಡುಬಂದಿಲ್ಲ.

ಯೋಗದ ಚಿಕಿತ್ಸಾ ಮುದ್ರೆಗಳ ಪೈಕಿ ವರುಣ ಮುದ್ರೆ ಅಥವಾ ಭುಧಿ ಮುದ್ರೆಯು ತ್ರಿಶೂಲ ಹಸ್ತದಂತಿದ್ದು; ಅಂಗೈ ಮೇಲ್ಮುಖವಾಗಿರಿಸಿ ವರುಣ ತತ್ತ್ವವನ್ನು ಪ್ರತಿನಿಧಿಸುವ ಕಿರುಬೆರಳು ಅಗ್ನಿ ತತ್ವದ ಹೆಬ್ಬೆರಳನ್ನು ಸ್ಪರ್ಶಿಸುವುದು ಇದರ ಲಕ್ಷಣ. ಗ್ಯಾಸ್ಟ್ರೋ ಎಂಟ್ರೈಟಿಸ್, ಕಣ್ಣಿನ ಶುಷ್ಕತೆ–ಉರಿ, ಒಣಕೆಮ್ಮು ನಿವಾರಣೆಗೆ, ರಕ್ತದೊತ್ತಡ ಕಡಿಮೆ ಮಾಡಲು, ಮುಪ್ಪು ಮುಂದೂಡಲು, ಚರ್ಮರೋಗ ನಿವಾರಣೆಗೆ, ಚರ್ಮವು ಮೆದು ಮತ್ತು ಕಾಂತಿಯುಕ್ತವಾಗಲು, ಬಾಯಾರಿಕೆ–ಆಯಾಸ–ಬಾಯಿ ಒಣಗುವಿಕೆಯಿಂದ ವಿಮೋಚನೆಗೆ, ದೇಹದ ತೇವಾಂಶ ಕಾಯ್ದುಕೊಳ್ಳಲು, ಪಚನ ಕ್ರಿಯೆ–ರಕ್ತ ಶುದ್ಧೀಕರಣಕ್ಕೆ ಸಹಕಾರಿ. ಅಂತೆಯೇ ಕಾಲು ಒಡೆಯುವುದು–ಕಜ್ಜಿ–ಸಂಧಿವಾತ–ನಾಲಿಗೆ ತೊಂದರೆ–ಮೂರ್ಛೆ ನಿವಾರಣೆಗೆ, ಸ್ತ್ರೀಯರ ಮಾಸಿಕ ಸ್ರಾವದ ಸಂತುಲನೆಗೆ ಈ ಮುದ್ರೆಯ ಬಳಕೆ ಅನುಕೂಲಕರ.

**ನೃತ್ಯ ವಿನಿಯೋಗ :** ಬಿಲ್ವಪತ್ರೆ ಮೂರು ಎಂದು ಹೇಳುವುದು, ತ್ರಿಶೂಲ, ತ್ರಯೋಗುಣ, ತ್ರಿಮೂರ್ತಿಗಳು, ತ್ರಿಲೋಕಗಳು.

**ಇತರೇ ವಿನಿಯೋಗ :** ಭಸ್ಮಾದಿ ಊರ್ಧ್ವಪುಂಡ್ರ ವಿಧಿಗಳ ಪ್ರಯೋಗ, ಬೇಲದ ಎಲೆಗಳ ಸೂಚನೆಗೆ, ಶಿವ–ದೇವಿಯರು ದುಷ್ಟಸಂಹಾರದ ಸಮಯದಲ್ಲಿ ವೀರ–ಶೌರ್ಯ–ಕ್ರೋಧ–ರೌದ್ರದ ಪ್ರತೀಕವಾಗಿ ಬಳಸಬಹುದು.

ಅಭಿನಯದರ್ಪಣ ತಿಳಿಸುವಂತೆ ಎಡಗೈಯಿಂದ ತ್ರಿಶೂಲಹಸ್ತವನ್ನೂ, ಬಲಗೈಯಿಂದ ಶಿಖರಹಸ್ತವನ್ನು ಮೇಲ್ಮುಖವಾಗಿ ಹಿಡಿಯುವುದು **ಷಣ್ಮುಖ ಹಸ್ತ**ವೆನಿಸಿಕೊಳ್ಳುತ್ತದೆ. ಎಡಗೈಯಲ್ಲಿ ಶಿಖರಹಸ್ತವನ್ನೂ, ಬಲಗೈಯಲ್ಲಿ ತ್ರಿಶೂಲವನ್ನು ಹಿಡಿದರೆ **ಶನೈಶ್ಚರ ಹಸ್ತ** ಭರತಾರ್ಣವದ ಪ್ರಕಾರ ಪದ್ಮಕೋಶವನ್ನು ಎಡಕೈಯ್ಯಲ್ಲೂ, ತ್ರಿಶೂಲವನ್ನು ಬಲಕೈಯ್ಯಲ್ಲೂ ಹಿಡಿದು ಶೈವ ಸ್ಥಾನಕದಲ್ಲಿ ನಿಲ್ಲುವುದು **ಅರ್ಧನಾರೀಶ್ವರ ಹಸ್ತ** ಶೈವ ಸ್ಥಾನಕದಲ್ಲಿ ನಿಂತು ಶೂಲ ಮುದ್ರೆಯನ್ನು ಬಲಗೈಯಲ್ಲೂ, ಮೃಗಶೀರ್ಷವನ್ನು ಎಡಗೈಯ್ಯಲ್ಲೂ ಹಿಡಿಯುವುದು **ಸದಾಶಿವ ಹಸ್ತ**. **ಶಿವನ ಪಂಚ ಮುಖ**ಗಳಲ್ಲಿ ಒಂದಾದ **ಸದ್ಯೋಜಾತ ಮೂರ್ತಿ**ಗೆ ಹಂಸಾಸ್ಯ ಹಸ್ತಗಳನ್ನು ಕಿವಿಯ ಬಳಿ ಹಿಡಿಯುವುದು ಅಥವಾ ಕಟಕಾಮುಖವನ್ನು ಎಡಕಿವಿಯ ಬಳಿಯೂ, ತ್ರಿಶೂಲವನ್ನೂ ಬಲಗೈಯಲ್ಲೂ ಹಿಡಿಯಬೇಕು.

**ನಿತ್ಯ ಜೀವನದಲ್ಲಿ** ಈ ಹಸ್ತವನ್ನು ಮೂರು ಎಂಬ ಸೂಚನೆಗೆ, ಚುಚ್ಚುವುದನ್ನು ಬಿಂಬಿಸಲು ಬಳಸಬಹುದು.

ಕಿರು ಬೆರಳು ಮತ್ತು ಹೆಬ್ಬೆರಳ ತುದಿಗಳನ್ನು ಸೇರಿಸಿ ಜೋಡಿಸಿ, ಮಧ್ಯ, ತೋರು, ಉಂಗುರ ಬೆರಳನ್ನು ಜೋಡಿಸಿ, ನೇರ ಚಾಚುವ ಹಸ್ತ ಮತ್ತೊಂದಿದ್ದು ಅದೂ ಕೂಡಾ ತ್ರಿಶೂಲಹಸ್ತವನ್ನು ಹೋಲುತ್ತದೆ. ಅದರ ಹೆಸರು **ಕಟಕ ಹಸ್ತ** ಕೆಲವೊಂದು ಪಠ್ಯಗಳಲ್ಲಿ ಈ ಹಸ್ತಕ್ಕೆ ಸಂದಂಶದ ಉಂಗುರ ಮತ್ತು ಮಧ್ಯ ಬೆರಳ ತುದಿಗಳನ್ನು ಸೇರಿಸುವುದು ಲಕ್ಷಣ ಎನ್ನಲಾಗಿದೆ. **ವಿನಿಯೋಗ :** ಆಹ್ವಾನ, ನಿರ್ದೇಶನ, ಚಲನೆ.

---

**ಇಲ್ಲಿಗೆ ಭರತನಾಟ್ಯ ಶೈಲಿಗೆ ಆಧಾರಗ್ರಂಥವೆನಿಸಿರುವ ನಂದಿಕೇಶ್ವರನ 'ಅಭಿನಯ ದರ್ಪಣ' ಗ್ರಂಥ ತಿಳಿಸಿದ 28 ಅಸಂಯುತ ಹಸ್ತ ಅಂದರೆ ಒಂದು ಅಂಗೈಯಿಂದ ಸೂಚಿಸುವ ಸಂವಹನ ಮುದ್ರಿಕೆಗಳ ಅಧ್ಯಾಯ ಸಮಾಪ್ತಿಯಾದುದು. ಮುಂದಿನ ಸಂಚಿಕೆಯಿಂದ 24 ಬಗೆಯ ಸಂಯುತ ಹಸ್ತ– ಎರಡೂ ಅಂಗೈಗಳಿಂದ ಕೈಗೊಳ್ಳುವ ಹಸ್ತಲಕ್ಷಣಗಳ ಪಾಠ ಪ್ರವೇಶಿಕೆ ಪ್ರಾರಂಭ.**

## ದೀವಟಿಗೆ

# ಫಲಪ್ರದವೆನಿಸಿದ ಡಾ.ಪದ್ಮಾ ಸುಬ್ರಹ್ಮಣ್ಯಂ ನೇತೃತ್ವದ ಶಿಬಿರ

ಭರತ ಕಲೆಗಳ ಆದ್ಯ ಗುರು ಭರತಮುನಿಗೆ ಭಾರತದಲ್ಲೇ ಮೊತ್ತ ಮೊದಲನೆಯ ಬಾರಿಗೆ ದೇವಾಲಯವನ್ನೂ ಮತ್ತು ಕಲೆಗಳ ಕುರಿತಾದ ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸುವ ಉದ್ದೇಶದಲ್ಲಿರುವ ಭರತನೃತ್ಯದ ಅಗ್ರಮಾನ್ಯ ಕಲಾವಿದೆ ಡಾ.ಪದ್ಮಾಸುಬ್ರಹ್ಮಣ್ಯಂ ಅವರು ನಿಧಿ ಸಂಗ್ರಹಣೆಗಾಗಿ ಒಂದುವಾರದ ಭರತನಾಟ್ಯ ಶಿಬಿರವನ್ನು ನಿರುಪಮಾ ರಾಜೇಂದ್ರ ಅವರ ಅಭಿನವ ಡ್ಯಾನ್ಸ್ ಕಂಪೆನಿಯ ಆವರಣದಲ್ಲಿ ಜುಲೈ 4ರಿಂದ 10ರ ವರೆಗೆ ಆಯೋಜಿಸಿದ್ದರು. ನೃತ್ಯ ಗುರು ಮತ್ತು ವಿದ್ಯಾರ್ಥಿಗಳ ವಿಭಾಗದಲ್ಲಿ ಜರುಗಿದ ಈ ಕಮ್ಮಟವು ಕರ್ನಾಟಕದ ಕಲಾವಿದರಿಗೆ ನೃತ್ಯಕಲೆಗೆ ಸಂಬಂಧಿಸಿದಂತೆ ಹೊಸ ದೃಷ್ಟಿಕೋನವನ್ನು ಕೊಟ್ಟದ್ದು ನಿಜಕ್ಕೂ ಅಭಿನಂದನೀಯ.

ಶಿಬಿರದ ಎರಡು ದಿನಗಳು ಅಂಗೋಪಾಂಗ ಬೇಧ, ಚಾರಿ, ಕೆಲವು ಕರಣಗಳ ಅಭ್ಯಾಸ ನೃತ್ಯ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ನೃತ್ಯಶಿಕ್ಷಣದ ನವೀನ ಮುಖಗಳನ್ನು ಪರಿಚಯಿಸಿದರೆ ; ಉಳಿದ ದಿನಗಳು ಡಾ.ಪದ್ಮಾ ಅವರು ಪುರಂದರದಾಸರ ಕೀರ್ತನೆ 'ಹಿಡಕೋ ಬಿಡಬ್ಯಾಡ'ಕ್ಕೆ ಅಳವಡಿಸಿದ ವರ್ಣ ಬಂಧ ಹಾಗೂ ಪದ್ಮಾ ಅವರ ತಾಯಿ ಮೀನಾಕ್ಷಿ ಸುಬ್ರಹ್ಮಣ್ಯಂ ರಚಿತ ಕೃಷ್ಣನ ಕುರಿತ ನಾಮಾವಳಿಗೆ ಸಂಯೋಜಿಸಿದ ನರ್ತನವು ಕಲಿಕೆಯಲ್ಲಿ ಅರಳಿತ್ತು. ಸಾಮಾನ್ಯವಾಗಿ ವರ್ಣ ಮುಂತಾದ ಭರತನಾಟ್ಯದ ಸಂಪ್ರದಾಯದ ಕಟ್ಟುನಿಟ್ಟುಗಳಿಂದ ಆಚೆಗಿನ ರಸಭಾವದಲ್ಲಿ ಮಿಂದೇಳುವ ಪದ್ಮಾ ಅವರು ಈ ಬಾರಿ ವರ್ಣ, ಭಜನ್ ಕಲಿಕೆಗೆ ಶಿಬಿರವನ್ನು ಸೀಮಿತ ವಾಗಿಸಿದರೇನೋ ಎಂದೆನಿಸಿದರೂ; ಕಣ್ತೆರೆಸುವ ಅವರ ಆಹ್ಲಾದರೂಪದ ಸಾಕ್ಷಾತ್ಕಾರ ಮತ್ತು ಅವರ ಅನುಭವ, ಅಭಿನಯ ಸೂಕ್ಷ್ಮ ಸಂದರ್ಭಗಳು, ದಾಸರ ಪದಗಳಿಗೆ ವರ್ಣದ ಸವಾಲೆನಿಸುವ ಸಂಯೋಜನೆಯ ಮಾದರಿ ಬೆಂಗಳೂರನ್ನೂ ಒಳಗೊಂಡಂತೆ ವಿವಿಧ ಪ್ರದೇಶಗಳಿಂದ ಆಗಮಿಸಿದ್ದ ನೃತ್ಯ ಕಲಾವಿದರಿಗೆ ಚಿಂತನಾರ್ಹ ದೃಷ್ಟಿಯನ್ನಿತ್ತಿದೆ. ಈ ಸಂದರ್ಭದಲ್ಲಿ ಸಮಯದ ಅಭಾವವೋ, ಅಭಿಲಾಷಿತಾರ್ಥಿಗಳ ಅಂತರ್ಗತ ಅಭ್ಯಾಸ–ನಿಲುವುಗಳಿಂದಲೋ ಅಥವಾ ಕರಣ, ಚಾರಿ ಅನುಷ್ಠಾನ– ಅಧ್ಯಯನದ ಅಲಭ್ಯತೆಯ ಪರಿಣಾಮವೋ, ಉದ್ದೇಶಿತಾರ್ಥದ ರಾಜಿಗೋ ಶಿಬಿರ ಹಾಗೂ ನೃತ್ಯ ತರಬೇತಿಯ ಕುರಿತಂತೆ ಇದ್ದ  ಕೆಲ ನಿರೀಕ್ಷೆಗಳು ಫಲಗೂಡದೇ ಕೊರತೆಗಳಾಯಿತೇನೋ ಎಂದು ಅನಿಸಿದ್ದು ದಿಟ. ಆದರೂ ಸಾಗರದಲ್ಲಿ ಮೊಗೆದಷ್ಟೇ ದಕ್ಕುವುದು ಎಂಬ ಉಕ್ತಿಯೂ ಅನ್ವಯವೇ ಹೌದು.

ಶತಾವಧಾನಿ ಡಾ. ಆರ್. ಗಣೇಶ್ ನಾಟ್ಯಶಾಸ್ತ್ರ ಮತ್ತು ಕಲೆಗಳ ಕುರಿತಂತೆ ಇತ್ತ ಏಳು ದಿನಗಳ ಉಪನ್ಯಾಸವೂ ಬೋಧಪ್ರದವಷ್ಟೆ ಅಲ್ಲದೆ ನೆರೆದ ಶಿಬಿರಾರ್ಥಿಗಳ ಕಣ್ಣುಗಳನ್ನು ಹನಿಗೂಡಿಸಿದ ಭಾವುಕ ಕ್ಷಣಗಳನ್ನು ತಂದಿತ್ತಿತು. ಒಂದರ್ಥದಲ್ಲಿ ಶಿಬಿರದ ಮುಖ್ಯ ಸತ್ತ್ವ ಶತಾವಧಾನಿ ಗಣೇಶರ ಉಪನ್ಯಾಸದಲ್ಲೇ ಕೇಂದ್ರೀಕೃತ ವಾಗಿತ್ತೆಂದರೂ ತಪ್ಪಲ್ಲ. ಅಷ್ಟೇ ಅಲ್ಲ; ಭರತಾಲಯ ನಿರ್ಮಾಣದಲ್ಲಿ ಕರ್ನಾಟಕದ ಶಿಬಿರಾರ್ಥಿಗಳ ಪಾಲ್ಗೊಳ್ಳುವಿಕೆಯ ಧನ್ಯತೆಯನ್ನು ಮನತುಂಬಿ ಸ್ಮರಿಸುವುದರೊಂದಿಗೇ; ಶಿಬಿರಾರ್ಥಿಗಳ ಉತ್ಸಾಹವನ್ನು ಕಂಡು ಸಂತುಷ್ಟರಾದ 'ಪದ್ದು ಅಕ್ಕ' ಮತ್ತೊಮ್ಮೆ ಮಗದೊಮ್ಮೆ ಶಿಬಿರವನ್ನು ಆಯೋಜಿಸಲು ಉತ್ಸುಕರಾಗಿರುವುದು ನಮ್ಮ ಹೆಮ್ಮೆ. ಅಂದಹಾಗೇ ಡಾ.ಪದ್ಮಾ ಅವರು ಯೋಜಿಸಿದ ಭರತಮುನಿಯ ಆಲಯದಂತಹ ಉದಾತ್ತ ಆಶಯ, ಹನಿ ಹನಿಗೂಡಿ ಹಳ್ಳವಾಗಿಸುವ ಉದ್ದೇಶದ ಪ್ರಯತ್ನಗಳು ನಮ್ಮ ನಾಡಿನಲ್ಲೂ ಮೂಡಿಬಂದು ಕರ್ನಾಟಕದ ಮಸುಕಾದ ನೃತ್ಯ ಪರಂಪರೆಯನ್ನು, ನರ್ತನದೆಡೆಗಿನ ಕಾಳಜಿಯನ್ನು ಸಮೃದ್ಧವಾಗಿಸಲಿ.

## ಆಹಾರ್ಯ, ಆಂಗಿಕಕ್ಕಷ್ಟೇ ತೃಪ್ತವಾದ 'ಹೊಯ್ಸಳ ವೈಭವ'

ಅಂತರಾಷ್ಟ್ರೀಯ ಪ್ರಖ್ಯಾತಿಯ ನೃತ್ಯ ಗುರು ಡಾ.ಮಾಯಾ ರಾವ್ ಅವರ ಮೂಸೆಯಲ್ಲಿ ಅರಳಿದ 'ಹೊಯ್ಸಳ ವೈಭವ' ಹಾಗೂ 'ಅಮೀರ್ ಖುಸ್ರು' ರೂಪಕಗಳ ರಂಗ ಪ್ರದರ್ಶನವು ಇತ್ತೀಚೆಗೆ ( ಜುಲೈ 19) ಅವರ ನಾಟ್ಯ ಇನ್ಸ್ಟಿಟ್ಯೂಟ್ ಆಫ್ ಕಥಕ್ ಆ್ಯಂಡ್ ಕೊರಿಯೋಗ್ರಫಿಯ ಬೆಳ್ಳಿಹಬ್ಬದ ಪ್ರಯುಕ್ತ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜನೆಗೊಂಡಿತ್ತು.

ಆಂಗಿಕ, ಆಹಾರ್ಯ( ವೇಷಭೂಷಣಾದಿ ರಂಗ ಸನ್ನಿವೇಶ)ದ ನೆಲೆಯಲ್ಲಿ ಎರಡೂ ರೂಪಕಗಳು ಭವ್ಯವಾಗಿತ್ತಾದರೂ ಸಾತ್ತ್ವಿಕವನ್ನು ಮುಟ್ಟುವಲ್ಲಿ ಇನ್ನೊಂದಷ್ಟು ಶ್ರಮ ನಿರೀಕ್ಷಿತ. ವಾಚಿಕಾಭಿನಯ ಅಥವಾ ಹಿನ್ನಲೆ ಸಾಹಿತ್ಯದ ಉಪಯೋಗವೂ ತಕ್ಕಮಟ್ಟಿಗೆ ಕಡಿಮೆ ಇದ್ದುದರಿಂದ ಹಾಗೂ ಒಂದರ್ಥದಲ್ಲಿ 'ಹೊಯ್ಸಳ ವೈಭವ' ರೂಪಕದ ಒಟ್ಟಾರೆ ಸಂಯೋಜನೆಯು ಶೀರ್ಷಿಕೆಯನ್ನುಳಿದು ಯಾವ ಬಗೆಯ ಹೊಯ್ಸಳ ಅಥವಾ ಕರ್ನಾಟಕದ ನೆನಪುಗಳನ್ನೂ ಗಮನಾರ್ಹವಾಗಿ ಬಿಂಬಿಸದೇ ; ಕೇವಲ ವಿಷ್ಣುವರ್ಧನನ ಯುದ್ಧ ವೈಭವದ ಕುರಿತ ಆಂಗಿಕಾಭಿನಯ ಮತ್ತು ನಡೆಗಳು ಪ್ರಧಾನವಾಗಿದ್ದರಿಂದ ಅದು ಯಾವುದೇ ದೇಶದ ರಾಜನ ಯುದ್ಧಾದಿ ಶ್ರಮಗಳ ಕುರಿತ ಒಂದು ಪ್ರತೀಕವೆಂಬಂತೆ ಆಗಿ ಹೋಗುವ ಸಂಭವ ಗಮನಾರ್ಹವಾಗಿಯೇ ಕಂಡಿವೆ. ಅದರೊಂದಿಗೆ ಶಾಂತಲೆಯ ನೃತ್ಯವೈಭವದ ಪ್ರಸ್ತುತಿಗೆ ಯೋಜಿಸಲಾದ ಜತಿಸ್ವರವೂ ನಿರೀಕ್ಷಿತ ಪ್ರಭಾವ ತೋರಲಿಲ್ಲ. ಇದರಂತೆಯೇ 'ಅಮೀರ್ ಖುಸ್ರು' ಕೂಡಾ ಬಿಡಿಬಿಡಿಯಾದ ನೃತ್ಯ ಸನ್ನಿವೇಶಗಳ ನಿರೂಪಣೆಯಿಂದ ರಂಗರೂಪ ಸಂವಹನಕಾರಿಯಾಗುವಲ್ಲಿ ತುಸು ತಡವೆನಿಸುತ್ತದೆ. ಈ ನಿಟ್ಟಿನಲ್ಲಿ ಎರಡೂ ರೂಪಕಗಳೂ ಗಟ್ಟಿಯಾದ ಕಥಾವಸ್ತುವಿನ ಹಿನ್ನಲೆಯನ್ನು ಜೊತೆಗಿರಿಸಿಕೊಂಡು ಪುನರಾವರ್ತನೆಗಳನ್ನು ಕಡಿಮೆ ಮಾಡಿಕೊಂಡರೆ ಅದರೊಳಗಿನ ಚಮತ್ಕಾರೀ ನಡೆಗಳು ಒಟ್ಟಂದವನ್ನು ಶ್ರಮಿಸುತ್ತವೆ. ಇವೆಲ್ಲದರ ಹೊರತು ರಂಗರೂಪಕದ ಒಟ್ಟು ಧನಾತ್ಮಕ ಅಂಶವೆಂದರೆ ಪಾತ್ರಗಳ ವೇಷಭೂಷಣ, ಬೆಳಕು–ನೆರಳಿನ ಸಂಯೋಜನೆಯೇ ಆಗಿರುವುದರಿಂದ ವೈಭವಯುತ ರಂಗನಿರ್ಮಾಣ ಸಫಲವಾಗಿದೆ ಯೆಂದು ಹೇಳಬಹುದು.

ದೀವಟಿಗೆ

## ಅಚ್ಚುಕಟ್ಟಿನ ಲಯ, ರಸಾನುಭೂತಿ : ಶ್ರೀಮತಿ ಅರ್ಚನಾ ಮತ್ತು ಚೇತನಾ

ಅನ್ನ ಬೆಂದ ಸೂಚನೆ ಒಂದು ಅಕ್ಕಿ ಕಾಳಿನಲ್ಲೇ ಗೊತ್ತಾದ ಬಗೆಯ ಪಕ್ವತೆ ಅಲ್ಲಿತ್ತು. ನೃತ್ಯ ಸೌಂದರ್ಯಕ್ಕೆ ಬೇಕಾದುದು ರಸಾನುಭೂತಿಯ ಚೈತನ್ಯ ಎಂಬುದನ್ನು ಸ್ಪಷ್ಟಪಡಿಸಿದವರು ಕರ್ನಾಟಕ ನೃತ್ಯಕಲಾ ಪರಿಷತ್‌ನ 'ಅಂಕುರ ನೃತ್ಯೋತ್ಸವ'ದ ಸಮಾರೋಪದಲ್ಲಿ (ಜುಲೈ 17) ನರ್ತಿಸಿದ ಅವಳಿ ಸಹೋದರಿಯರಾದ ಶ್ರೀಮತಿ ಅರ್ಚನ ಮತ್ತು ಚೇತನಾ. ಸುಸ್ಪಷ್ಟ ಹೆಜ್ಜೆಗಾರಿಕೆಯಲ್ಲಿ ತೋರಿಬಂದ ಲಯನೈಪುಣ್ಯ, ಯುಗಳ ಅಥವಾ ದ್ವಂದ್ವ ನರ್ತನಕ್ಕೆ ಬೇಕಾದ ಸಾಮ್ಯ, ಹಾರ್ದಿಕ ಅನುಸರಣಾರ್ಹ ಮನೋಧರ್ಮ, ಪರಸ್ಪರ ಸಾಂಗತ್ಯ, ಸಹಜ ಹೊಂದಾಣಿಕೆ, ಮೇಲಾಗಿ ಅಭಿನಯಾದಿ ಕೌಶಲಗಳಲ್ಲಿ ಭಾವ ಸ್ಫುಟತೆ ಮತ್ತು ನರ್ತನವನ್ನು ಅನುಭವಿಸುವ ರಸದೃಷ್ಟಿ ಇವರ 'ಹೈಲೈಟ್'.

ದ್ವಾರಕೀ ಕೃಷ್ಣಸ್ವಾಮಿ ಅವರ ಕಮಾಚ್ ರಾಗದ ಕನ್ನಡ ವರ್ಣ 'ಭುವನಸುಂದರನ' ಕ್ಕೆ ಹೆಣೆದ ಔಚಿತ್ಯ ಪೂರ್ಣ ನೃತ್ತ ಮಧ್ಯಮಕಾಲ ಚರಣದ ನಂತರಕ್ಕೆ ಅನುಗುಣವಾಗಿ ತೆರೆದುಕೊಂಡ ವೇಗ ಹಾಗೂ ಆರ್ದ್ರ ಅಭಿನಯ ; ರೇವತಿ ರಾಗದ ಕೀರ್ತನೆ 'ಮಹಾದೇವ ಶಿವಶಂಭೋ'ಗೆ ನಟೇಶ ಕೌತ್ವದ ಸಾಹಿತ್ಯ, ಪಾಟಾಕ್ಷರ ಸಂಯೋಜನೆಗೆ

ಸಂದ ಗಾಂಭೀರ್ಯ, ಭಕ್ತಿ, ರೌದ್ರಾದಿ ನವರಸಗಳು ಪ್ರೇಕ್ಷಕರನ್ನು ಹಿಡಿದಿರಿಸಿದಂತದ್ದು. ಈ ನಿಟ್ಟಿನಲ್ಲಿ ಇವರೀರ್ವರ ನೃತ್ಯಗುರು ಭಾನುಮತಿಯವರ ಶ್ರಮ ಮೆಚ್ಚುವಂತಹುದು ಹಾಗೂ ನೃತ್ಯಕಛೇರಿ ಗಾಯನಕ್ಕೆ ಗಾಯಕರ ಕೊರತೆ ಎದುರಿಸುತ್ತಿರುವ ಇಂದಿನ ಕಾಲಕ್ಕೆ ಸ್ವತಃ ನೃತ್ಯ ಕಲಾವಿದೆಯಾಗಿರುವ ಶ್ರುತಿ ರಾಜಲಕ್ಷ್ಮಿ, ಕಾರ್ಯಕ್ರಮ ಮತ್ತು ಕ್ಷೇತ್ರಕ್ಕೆ ಹೊಸ ಮಿಂಚನ್ನಿತ್ತಿದ್ದು ಸ್ವಾಗತಾರ್ಹ. ಉತ್ತಮ ಪ್ರಯತ್ನಕ್ಕೆ ಉಜ್ವಲ ಭವಿಷ್ಯವಿದೆ. f

## ದೀವಟಿಗೆ

## ಕರ್ನಾಟಕ ನೃತ್ಯ ವೈಭವದ ಪ್ರಸ್ತುತಿಗೆ ಸಾಕಾರ ಯತ್ನ : ಭರತಾಗಮ

ಕರ್ನಾಟಕದ ಶ್ರೀಮಂತ ಭರತನಾಟ್ಯ ನೃತ್ಯಪರಂಪರೆಗೆ ಸಾಕ್ಷಿಯಾದುದು ಭರತಾಗಮ ಪ್ರತಿಷ್ಠಾನದಿಂದ ಜುಲೈ 23 ಮತ್ತು 24ರಂದು ಬೆಂಗಳೂರಿನ ನಯನ ಸಭಾಂಗಣದಲ್ಲಿ ಆಯೋಜಿತವಾದ ಕರ್ನಾಟಕ ನೃತ್ಯಪರಂಪರೆಗಳ ಕುರಿತ ವಿಚಾರಸಂಕಿರಣ ಮತ್ತು ನೃತ್ಯಾಭಿವ್ಯಕ್ತಿ. ಕೇಂದ್ರ ಸಂಗೀತ ನೃತ್ಯ ಅಕಾಡೆಮಿಯಿಂದ ಪ್ರಾಯೋಜಿತವಾದ ಈ ಕಾರ್ಯಕ್ರಮ ಒಂದರ್ಥದಲ್ಲಿ ದಾಖಲೀಕರಣಕ್ಕೆ ಅನುಕೂಲಕರವಾಗಿ ಮತ್ತು ಕರ್ನಾಟಕ ನೃತ್ಯಪರಂಪರೆಗೆ ಸೂಕ್ತ ಮನ್ನಣೆ ದೊರಕುವ ನಿಟ್ಟಿನ ಪ್ರಯತ್ನವಾಗಿರುವುದು ಶ್ಲಾಘನೀಯ. ಈ ಹಿನ್ನಲೆಯಲ್ಲಿ ಹಿರಿಯ ಕಲಾ ಸಂಶೋಧಕ ಡಾ. ಸುನೀಲ್ ಕೊಠಾರಿ ಅವರ ಉಪಸ್ಥಿತಿ ಹೊಸ ಭಾಷ್ಯ ಬರೆಯಬಲ್ಲುದೆಂಬ ಭರವಸೆಯಿದೆ.

ಈ ಸಂದರ್ಭದಲ್ಲಿ ಡಾ. ಚೂಡಾಮಣಿ ನಂದಗೋಪಾಲ್ (ಕರ್ನಾಟಕ ನೃತ್ಯಪಂಪರೆ), ಡಾ.ಕರುಣಾ ವಿಜಯೇಂದ್ರ ( ಕರ್ನಾಟಕದ ದೇವಾಲಯಗಳಲ್ಲಿ ರಂಗಭೋಗ), ಡಾ.ಮಾಲಾ ಶಶಿಕಾಂತ್ (ಕರ್ನಾಟಕ ನೃತ್ಯ ಶೈಲಿಗಳು) ಮಂಡಿಸಿದ ಶಾಸನ, ಶಿಲ್ಪ, ಸಾಹಿತ್ಯ, ಪ್ರಾಯೋಗಿಕ ನೆಲೆಯನ್ನಾಧರಿಸಿದ ಸಂಶೋಧನಾ ಲೇಖನಗಳು ಸ್ವಾರಸ್ಯಕರವೂ, ಮಾಹಿತಿಪ್ರದವೂ ಆಗಿ ರಂಗದಲ್ಲೂ, ಪುಸ್ತಕರೂಪದಲ್ಲೂ ಹೊರಬಂದು ಕರ್ನಾಟಕದ ನೃತ್ಯವೈಭವದ ಅನಾವರಣಕ್ಕೆ ಸಾಕ್ಷಿಯೆನಿಸಿತು.

ನಂತರ ನಡೆದ ನೃತ್ಯಾಭಿವ್ಯಕ್ತಿಯಲ್ಲಿ ಮೈಸೂರು ಶೈಲಿಯ ಭರತನಾಟ್ಯ ನಿರೂಪಣೆಯನ್ನು ಸಮರ್ಥವಾಗಿ ನಿರ್ವಹಿಸಿದವರು ಭರತ ಕಲಾ ನಿಕೇತನದ ಗುರು ಪ್ರೊ.ಶಕುಂತಲಾ ಅವರ ಶಿಷ್ಯರು. ಪೂರ್ವರಂಗ ವಿಧಿಗಳಲ್ಲಿನ ಸಭಾವಂದನೆ, ಚೂರ್ಣಿಕೆ, ಸೊಲ್ಕಟ್ಟು ಇತ್ಯಾದಿಗಳೊಂದಿಗೆ ಪೊನ್ನಯ್ಯ ಪಿಳ್ಳೈ ಅವರ ಪ್ರಖ್ಯಾತ ತಮಿಳು ವರ್ಣ 'ಮನವೀ ಚೈಕೊನ'ವು ಪರಿಣಾಮಕಾರಿಯಾಗಿ ವಿಶೇಷ ಸಂಗತಿಗಳೊಡನೆ ಮೂಡಿಬಂದದ್ದು ಸ್ತುತ್ಯಾರ್ಹ. ಕಲಾಕ್ಷೇತ್ರ ಶೈಲಿಯ ಸಂಯೋಜನೆಗಿಂತಲೂ ಸಹಜವೆನಿಸುವ ಮಟ್ಟಿಗೆ ಭಾವ–ರಸ ಸಂವಹನದಲ್ಲಿ ಮತ್ತು ಔಚಿತ್ಯಪೂರ್ಣ ಜತಿನಿರ್ವಹಣೆಯಲ್ಲಿ ಮತ್ತು ಅರ್ಥಗರ್ಭಿತ ಸಂಚಾರೀಭಾವದೊಳಗೆ ವರ್ಣವು ಅರಳಿ ನಿಂತದ್ದು ನಿಜಕ್ಕೂ ರಸಿಕರನ್ನು ತೃಪ್ತರನ್ನಾಗಿಸಿತು. ತಮಿಳು ಭಾಷೆಯ ವರ್ಣವು ಕರ್ನಾಟಕದ ನೃತ್ಯ ಪರಂಪರೆಯ ಪ್ರತಿಪಾದನೆಯಲ್ಲಿ ಅಷ್ಟು ಸೂಕ್ತವಲ್ಲ ಎಂಬ ಇರಿಸು ಮುರಿಸು ವ್ಯಕ್ತವಾದರೂ ಪರಂಪರೆಯ ಪ್ರಾಚೀನತೆ ಮತ್ತು ಕನ್ನಡ ವರ್ಣಗಳು ಆಗಿನ ಕಾಲಕ್ಕೆ ರಚನೆಯಾಗದಿದ್ದ ಹಿನ್ನಲೆಯಲ್ಲಿ ಆಯ್ಕೆ ಅನಿವಾರ್ಯವಾಗಿದೆ ಎಂಬ ಸ್ಪಷ್ಟೀಕರಣ ಖಂಡಿತಾ ಇದೆ. ಆದ್ದರಿಂದ ಭಾಷಾಆಯ್ಕೆಗಿಂತಲೂ ಹೆಚ್ಚಾಗಿ ಅದರ ಪ್ರಸ್ತುತಿ ಕರ್ನಾಟಕದ ನೃತ್ಯಪರಂಪರೆಯ ಪ್ರತಿನಿಧಿಸಿದ್ದು ಸಂವಹನಶೀಲವೂ ಆಗಿದ್ದದ್ದು ವಿಶೇಷ.

'ನೂಪುರ' ನೃತ್ಯ ಸಂಸ್ಥೆಯ ನಿರ್ದೇಶಕರಾದ ವಿದುಷಿ ಲಲಿತಾ ಶ್ರೀನಿವಾಸನ್ ವಿಚಾರಸಂಕಿರಣದ ಆಯೋಜನೆಯ ಹಿನ್ನಲೆಯಲ್ಲಿ ಪ್ರಧಾನ ಪಾತ್ರ ನಿರ್ವಹಿಸಿದವರು. ಆದರೆ ಅವರ ಶಿಷ್ಯೆಯರಿಂದ ಪ್ರತಿಪಾದನೆಯಾದ ಮೂಗೂರು–ಮೈಸೂರು ಶೈಲಿಗಳ ನೃತ್ತ–ಅಭಿನಯಗಳಲ್ಲಂತೂ ಸಹಜತೆಗಿಂತಲೂ ಪರಶೈಲಿಗಳ ಪ್ರಭಾವದ

ಅಂಶ ಹೆಚ್ಚು ಕಂಡಂತೆ ಭಾಸವಾಗಿ ಗುರುವಿನ ಶ್ರಮಕ್ಕೆ ತಕ್ಕ ಅಭಿವ್ಯಕ್ತಿ ರಂಗದಲ್ಲಿ ಆಗಲಿಲ್ಲವೆಂಬ ಅಭಿಪ್ರಾಯ ಕಾಡಿತು. ಅವುಗಳೊಂದಿಗೆ ನವೋದಯ ಕವಿಗಳ ಕನ್ನಡ ಗೀತೆಗಳನ್ನು ಅಭಿನಯಿಸುವುದರ ಬದಲಾಗಿ ಮತ್ತೊಂದಷ್ಟು ಮೂಲ ಶೈಲಿಯ ನೃತ್ಯಬಂಧಗಳನ್ನು ಪ್ರಸ್ತುತಪಡಿಸಿದ್ದರೆ ಒಟ್ಟಾರೆ ಪರಿಣಾಮ ಮತ್ತು ಆಶಯಕ್ಕೆ ಹೆಚ್ಚು ಇಂಬನ್ನೀಯುತ್ತಿತ್ತು. ಆದರೆ ಎರಡನೇ ದಿನದಂದು( ಜುಲೈ 24) ಲಲಿತಾ ಶ್ರೀನಿವಾಸನ್ ಪ್ರಸ್ತುತಪಡಿಸಿದ ನೃತ್ಯಪ್ರಾತ್ಯಕ್ಷಿಕೆಯೊಂದಿಗಿನ ಸಂಶೋಧನಾ ಪ್ರಬಂಧ 'ಸುಳಾದಿ'ಯು ಶತಮಾನಗಳ ನೃತ್ಯ ವೈಭವಕ್ಕೆ ಸಾಕ್ಷಿಯಾಗುವುದರೊಂದಿಗೆ ಪ್ರಾಯೋಗಿಕತೆ ಮತ್ತು ಶಾಸ್ತ್ರದ ಔಚಿತ್ಯಪೂರ್ಣ ಸಮ್ಮಿಲನದ ಪ್ರಜ್ಞೆಯನ್ನು ತಿಳಿಸಿಕೊಟ್ಟಿದ್ದಷ್ಟೇ ಅಲ್ಲದೆ ಮತ್ತಷ್ಟು ಅಧ್ಯಯನಕ್ಕೂ ಅವಕಾಶಗಳಿರುವುದನ್ನು ಸ್ಪಷ್ಟಪಡಿಸಿದೆ. 2 ದಶಕಗಳ ಹಿಂದೆ ನೃತ್ಯ ಸಂಶೋಧನಾ ಸಾಮಗ್ರಿಗಳ ಹೇರಳ ಕೊರತೆಯಿದ್ದಾಗ್ಯೂ ಕಣ್ಮರೆಯಾಗಿದ್ದ 'ಸುಳಾದಿ ಪ್ರಬಂಧ'ಗಳ ಪುನರ್‌ರಂಗನಿರ್ಮಾಣ ಕರ್ನಾಟಕದಲ್ಲಿ ಲಲಿತಾ ಶ್ರೀನಿವಾಸನ್ ಮಾಡಿರುವುದು ಅವರ ಸಂಶೋಧನಾ ಸಂಕಲ್ಪಕ್ಕೆ ಸಾಕ್ಷಿ.

ಜುಲೈ 24ರ ಬೆಳಗಿನ ಹೊತ್ತು ಮತ್ತೆರಡು ವಿಶಿಷ್ಟ ಪ್ರಾತ್ಯಕ್ಷಿಕೆಯಿಂದೊಡಗೂಡಿದ ಸಂಶೋಧನೆಗಳಿಗೆ ಅವಕಾಶವನ್ನಿತ್ತಿತು. ಅವುಗಳ ಪೈಕಿ ಮೊದಲನೇಯದು ರಾಧಿಕಾ ನಂದಕುಮಾರ್ ಅವರು ಪುನರ್–ನವೀಕರಿಸಿದ ಗೌಂಡಲೀ ನೃತ್ಯ ಪದ್ಧತಿಯ ಅನಾವರಣ. ಎರಡನೇಯದು ಡಾ. ತುಳಸೀ ರಾಮಚಂದ್ರ ಪ್ರಸುತಪಡಿಸಿದ ಪೇರಣೀ ನೃತ್ಯಶೈಲಿ. ಗೌಂಡಲೀಯ ಸಂಯೋಜನೆ ಚಾರಿ, ನೃತ್ತಹಸ್ತ, ಕರಣದಿಂದೊಡಗೂಡಿದ ಶತಮಾನಗಳ ಹಿಂದಿನ ನೃತ್ಯಶೈಲಿಯ ಕುರಿತ ಆಳವಾದ ಅಧ್ಯಯನದ ಫಲಶ್ರುತಿ. ಆದರೆ ಪೇರಣೀಯ ಕುರಿತಂತೆ ಸೌಂದರ್ಯಪೂರಿತವಾದ, ಕ್ರಮ–ಶಾಸ್ತ್ರ ವಿಶ್ಲೇಷಣೆಯುಳ್ಳ ಪರಿಣಾಮಕಾರಿ ನೃತ್ತವಾಗಿ ಕಂಡುಕೊಳ್ಳುವಲ್ಲಿ ಮತ್ತಷ್ಟು ಅಧ್ಯಯನಕ್ಕೆ ಅವಕಾಶವಿದ್ದು; ಹೇರಳ ಸಾಧ್ಯತೆಗಳನ್ನು ತಿಳಿಸಿಕೊಟ್ಟಿತು.

ನಂತರ ಸಂಜೆ ಜರುಗಿದ ನೃತ್ಯಾಭಿವ್ಯಕ್ತಿಯು ಕೋಲಾರ ಶೈಲಿಯ ಗುರು ವಿದ್ವಾನ್ ಸಿ.ರಾಧಾಕೃಷ್ಣ ಮತ್ತು ನಂಜನಗೂಡು ಪರಂಪರೆಯ ಡಾ. ಮಾಲಾ ಶಶಿಕಾಂತ್ ಅವರ ಶಿಷ್ಯರಿಂದ ಸೊಗಸಾಗಿ ಮೂಡಿಬಂದದ್ದಷ್ಟೇ ಅಲ್ಲದೆ ಆಸ್ಥಾನ, ಆಲಯ ನೃತ್ಯಪದ್ಧತಿಗಳ ಭಿನ್ನ ಆಚರಣಾ ನೃತ್ಯಬಂಧಗಳ ಪರಿಚಯ ಮಾಡಿಕೊಟ್ಟಿತು. ಕರ್ನಾಟಕ ನೃತ್ಯಪರಂಪರೆಯಲ್ಲಿನ ಅಭಿನಯ ಸ್ವಾತಂತ್ರ್ಯ, ಮುಕ್ತತೆ, ಸೌಂದರ್ಯ, ರಸದೃಷ್ಟಿ, ಭಾವವಿಶೇಷಕ್ಕೆ ಈ ಶೈಲಿಗಳನ್ನು ನರ್ತಿಸಿದ ಕಲಾವಿದರು ಸಾಕ್ಷಿಯಾದರು. ಒಟ್ಟಿನಲ್ಲಿ ಇಂತಹ ಅತ್ಯಪೂರ್ವ ಪ್ರಯತ್ನ ಮತ್ತು ಅದರ ಭವಿಷ್ಯದ ಬೆಳವಣಿಗೆ ಸ್ತುತ್ಯಾರ್ಹ. ಈ ಹಂತದಲ್ಲಿ ಇವುಗಳನ್ನು ಅರಿತು, ಆನಂದಿಸಿ, ಕಲಿತು ನರ್ತಿಸುವ ಕಲಾವಿದರು ಮತ್ತಷ್ಟು ಬೆಳೆದರೆ ಕರ್ನಾಟಕದ ನೃತ್ಯ ಶಾಸ್ತ್ರೀಯತೆಗೆ ಮೈಲಿಗಲ್ಲುಗಳು ದಕ್ಕಬಹುದು.

**(ಚಿಕ್ಕ, ಚೊಕ್ಕ, ಅಚ್ಚುಕಟ್ಟು, ಅರ್ಥಪೂರ್ಣ, ಕ್ಲೀಷೆ– ಸ್ಥಾನಬೇಧ ರಹಿತ, ವರದಿಯೆನಿಸದ ಔಚಿತ್ಯಪೂರ್ಣ ವಿಮರ್ಶೆಗಳಿಗೆ ಸದಾ ಸ್ವಾಗತವಿದೆ. ಬರೆಯುವವರಿಗೆ ವಯಸ್ಸು–ಸ್ಥಾನ–ಪ್ರದೇಶದ ಪರಿಮಿತಿಯಿರುವುದಿಲ್ಲ. ಉತ್ತಮ ವಿಮರ್ಶೆಗಳನ್ನು ರೂಢಿ ಮಾಡಿಸುವುದಷ್ಟೇ ನೂಪುರದ ಗುರಿ.)**

f

**ಸಂಚಿಕೆಗಾಗಿ ಸಹಕರಿಸಿದವರು**

**ಧರ್ಮದರ್ಶಿ ಹರಿಕೃಷ್ಣ ಪುನರೂರು**
**(ಮಾಜಿ ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್)**
**'ಶುಭವಾಗಲಿ' ಮುಲ್ಕಿ, ಮಂಗಳೂರು.**



**ಸುಧಾಕಿರಣ್ ಅಧಿಕಶ್ರೇಣಿ**
**ನಿರ್ದೇಶಕರು**
**ಕಿನಾರಾ ಸಂಸ್ಥೆ, ಬೆಂಗಳೂರು.**




**ಯಕ್ಷಗಾನ ಗುರು ಬನ್ನಂಜೆ ಸಂಜೀವ ಸುವರ್ಣ, ನೃತ್ಯ ಗುರುಗಳಾದ ಮಂಗಳೂರಿನ ವಿದುಷಿ ಸುಖದಾ ಭಾರ್ವೆ, ಬೆಂಗಳೂರಿನ ವಿದುಷಿ ಜ್ಯೋತಿ ಪಟ್ಟಾಭಿರಾಮ್, ವಿದುಷಿ ಪದ್ಮಿನಿ ಶ್ರೀಧರ್, ವಿದುಷಿ ವೀಣಾ ಎಸ್.ಮೊರಬ್, ಉಡುಪಿಯ ವಿದುಷಿ ಪ್ರವಿತಾ ಅಶೋಕ್, ನೃತ್ಯ ಸಂಶೋಧಕಿ ಶಾಲಿನಿ ಎ.ಆರ್, ಮಂಗಳೂರಿನ ಯೋಗಶಿಕ್ಷಕ ತಿರುಮಲೇಶ್ವರ ಭಟ್ ಈ ಸಾಲಿನ ಚಂದಾ ಸದಸ್ಯರಾಗಿದ್ದಾರೆ.**

ಋಣವೆಂಬುದನ್ನು ನನ್ನ ಪಾಲಿಗೆ – ಪ್ರೀತಿಯನ್ನು ತಮ್ಮ ಪಾಲಿಗೆ ಇರಿಸಿಕೊಂಡಿರುವಿರಿ. 'ನೂಪುರ ಭ್ರಮರಿ'ಯ ಕೊನೆಯ ಪುಟದಲ್ಲಿ ಗೆಜ್ಜೆ ಮಾತ್ರವಾದರೂ ಆ ಗೆಜ್ಜೆ ಮನಸ್ಸಿನ ಮಮತೆಯನ್ನು ನಳನಳಿಸುತ್ತಿದೆ.

**– ಮಾಸ್ಟರ್ ವಿಠಲ್, ಹಿರಿಯ ನೃತ್ಯ ಗುರುಗಳು, ಮಂಗಳೂರು.**

---

# ಸಂಶೋಧನಾ ಸಂಗ್ರಹ ಸಮೀಕ್ಷೆ

ನೂಪುರ ಭ್ರಮರಿ ಪತ್ರಿಕೆಯು ಕರ್ನಾಟಕದಲ್ಲಿ ಈಗಾಗಲೇ ನೃತ್ಯಕ್ಷೇತ್ರದಲ್ಲಿ ತೊಡಗಿಸಿಕೊಂಡ ಸಂಶೋಧಕರ ಕುರಿತಾದ ಮಾಹಿತಿಯನ್ನು ಸಂಕಲಿಸಿ ಕ್ರೋಢೀಕರಿಸಿ ಮುಖ್ಯವಾಹಿನಿಗೆ ತರುವ ಪ್ರಯತ್ನದಲ್ಲಿದೆ. ಈ ನಿಟ್ಟಿನಲ್ಲಿ ಕರ್ನಾಟಕದಲ್ಲಿ ಈಗಾಗಲೇ ನೃತ್ಯದಲ್ಲಿ ಆದ/ಆಗುತ್ತಿರುವ ಪಿಎಚ್‌ಡಿ/ಎಂಫಿಲ್ ಪ್ರಬಂಧಗಳು ಮತ್ತು ಪದವಿ ಪ್ರೌಢ ಪ್ರಬಂಧಗಳ ರಚನಾಕಾರರು/ಸಂಶೋಧಕರ ಕುರಿತು ಪತ್ರಿಕೆಯು ಅಂಕಣ ಮತ್ತು ಸಾವಕಾಶವಾಗಿ ಪುಸ್ತಕರೂಪದಲ್ಲಿ ಸಂಕಲನವನ್ನು ಹೊರತರಲಿದೆ. ಈಗಾಗಲೇ ಈ ಕುರಿತಂತೆ ಜಿಲ್ಲಾವಾರು ಪ್ರಾಥಮಿಕ ವಿವರಗಳು ಕ್ರೋಢೀಕೃತವಾಗಿದ್ದು ಮುಂದಿನ ಹಂತಗಳಿಗೆ ತಮ್ಮ ಸಹಕಾರದ ಅಗತ್ಯವಿದೆ. ಈ ಸಂಕಲನರೂಪವು ನೃತ್ಯ ಕ್ಷೇತ್ರದಲ್ಲಿ ಆಗಬೇಕಾದ ಸಂಶೋಧನೆಗಳ ಹಿನ್ನಲೆಯನ್ನು ಗಮನಿಸಿ ಕಲಾಸಕ್ತರ ಹಿತಾಸಕ್ತಿಯ ನಿಟ್ಟಿನಲ್ಲಿ ಆಗಲಿದ್ದು; ಶೈಕ್ಷಣಿಕ ವಲಯಕ್ಕೆ ಮತ್ತು ಸಂಶೋಧನಾಸಕ್ತ ಕಾರ್ಯಗಳ ಮಾಹಿತಿ ಸಂಗ್ರಹಣೆಗೆ ಸಹಕಾರಿಯಾಗಲಿದೆ.

ಆದ್ದರಿಂದ ಕರ್ನಾಟಕದಲ್ಲಿ ನೃತ್ಯ ಮತ್ತು ಅದಕ್ಕೆ ಪೂರಕವಾಗಿ ಇತಿಹಾಸ, ವಾಸ್ತುಶಿಲ್ಪ, ಸಂಗೀತ, ಶಿಲ್ಪಕಲೆ, ದೃಶ್ಯಕಲೆ, ಜಾನಪದ, ಸಮಕಾಲೀನ, ಸಾಮಾಜಿಕ ದೃಷ್ಟಿಕೋನ ಮುಂತಾಗಿ ವಿವಿಧ ಆಯಾಮಗಳಲ್ಲಿ ಆಗಿರುವ/ಆಗುತ್ತಿರುವ ಪ್ರಕಟಿತ/ಅಪ್ರಕಟಿತ, ಕನ್ನಡ/ಇಂಗ್ಲೀಷ್‌ನಲ್ಲಿ ಹೊರಬಂದ ಪಿಎಚ್‌ಡಿ/ಎಂಫಿಲ್ ಪ್ರಬಂಧ ಅಥವಾ ಪದವಿ ಪ್ರೌಢ ಪ್ರಬಂಧಗಳ (ಎಂ.ಎ ಡಿಸರ್ಟೇಶನ್, ಫೆಲೋಶಿಪ್ ಪ್ರಬಂಧಗಳು) ರಚನಾಕಾರರು, ಪದವಿಗೆ ಸಲ್ಲಿಸಲಾದ ವಿಷಯ ಮತ್ತು ಅದರ ಕುರಿತು ಸಂಶೋಧನಾ ಉದ್ದೇಶ ಮತ್ತು ಅಧ್ಯಯನ ವಿಧಾನವನ್ನೊಳಗೊಂಡ ಸಾರಲೇಖ ಹಾಗೂ ವಿಶ್ವವಿದ್ಯಾನಿಲಯ ಅಥವಾ ಕಾಲೇಜು, ಮಾರ್ಗದರ್ಶಕರು, ಸಲ್ಲಿಸಲಾದ ವರ್ಷ, ಸಂಶೋಧನೆಯು ಪ್ರಕಟಿತ ಕೃತಿಯಾಗಿದ್ದಲ್ಲಿ ಅದರ ಕುರಿತು ವಿವರ, ಪ್ರಕಟಿತ ಕೃತಿಯನ್ನು ಕಳಿಸುವ ಅನುಕೂಲವಿದ್ದಲ್ಲಿ ಒಂದು ಸಾದರಪ್ರತಿ, ಸಂಶೋಧನೆಗೆ ಸಂಬಂಧಿಸಿದ ಅನುಭವದ ವಿವರ, ಪಾಸ್ ಪೋರ್ಟ್ ಅಳತೆಯ ಭಾವಚಿತ್ರ, ಫುಲ್‌ಸ್ಕೇಪ್ 2 ಪುಟ ಮೀರದಂತೆ ಸ್ವವಿವರದ ಬಯೋಡಾಟಾವನ್ನು ಸಂಕ್ಷಿಪ್ತವಾಗಿ ಕಳುಹಿಸಬೇಕೆಂದು ವಿನಂತಿ. f

**ಅಂಗಳದ ಮಾತು ತಿಂಗಳ ಚರ್ಚೆ**

# ನೃತ್ಯ ಪಥ್ಯ

ಕಳೆದ ಸಂಚಿಕೆಯ **ಮಂಜೀರ**ದಿಂದ ಪ್ರೇರಿತನಾಗಿ ನಾನು ಬರೆದ ಲೇಖನವಿದು. ಪ್ರಾಥಮಿಕ ಶಿಕ್ಷಣ ಮಗುವಿನ ಮಾತೃಭಾಷೆಯಲ್ಲಾಗುವಂತೆ ಕಲೆಯ ಪ್ರಾಥಮಿಕ ಶಿಕ್ಷಣವೂ ಮಾತೃಭಾಷೆಯಲ್ಲಾದರೆ ಆ ಪ್ರದೇಶದ ಹೆಚ್ಚಿನ ಪ್ರೇಕ್ಷಕರೂ ಶಿಕ್ಷಿತರಾಗುತ್ತಾರೆ ಎಂಬುದನ್ನು ನಾನು ಅನುಮೋದಿಸುತ್ತೇನೆ.

ಎಲ್ಲದರೊಳಗೂ, ಪ್ರತಿಯೊಬ್ಬರಲ್ಲೂ 'ತನ್ನತನ' ಇರುತ್ತದೆ. ಅದು ಸಹಜ. ಅದನ್ನು ಸಾರ್ವತ್ರಿಕವಾಗಿ ಒಂದಾಗಿ ಹೇಳುವುದು ಅಸಾಧ್ಯವಾದರೂ 'ನಮ್ಮತನ' ಎಂದು ಗುಂಪು ಮಾಡಿಕೊಂಡು ಸಾಧನೆಯನ್ನು ಮುಂದುವರೆಸಲಾಗುವುದು. ಉದಾಹರಣೆಗೆ, ಪ್ರತಿಯೊಬ್ಬ ಗುರುಗಳೂ ಭರತನಾಟ್ಯದ ಪರೀಕ್ಷೆಗಳಿಗೆ ಶಿಷ್ಯರನ್ನು ಅಧ್ಯಯನ ಮಾಡಿಸುವಾಗ ಅವರವರ ಭರತನಾಟ್ಯದ ಪರಂಪರೆಗಳಿಗೆ ಅನುಸಾರವಾಗಿ ಬಗ್ಗಿಸಿ ಒಗ್ಗಿಸಲು ಶ್ರಮವಹಿಸುತ್ತಾರೆ. ಅವರು ತಮ್ಮ ಪರಂಪರೆಯಲ್ಲಿ ಎಷ್ಟು ಸಾಧನೆ ಮಾಡಿದ್ದಾರೆ ಮತ್ತು ಎಷ್ಟು ಸಾಧಿಸಿದ್ದಾರೆ ಎಂಬ ಅಳತೆ ಕಷ್ಟ ಸಾಧ್ಯ. ಆದರೆ ಒಬ್ಬ ಪ್ರತಿಭಾವಂತ ಮೂಲ ವ್ಯಕ್ತಿಯಿಂದ ಪರಂಪರೆ ಸಂಪ್ರದಾಯಕ್ಕೆ ಮಹತ್ತ್ವ ಬಂದು ಅದು ಆ ಸಮಾಜದ ಒಟ್ಟು ಗೌರವಕ್ಕೆ ಪಾತ್ರವಾಗಿ ಬೆಳೆಯುತ್ತದೆ ಎಂಬುದು ಸ್ಪಷ್ಟ. ಈ ವ್ಯವಹಾರವನ್ನು ನಮ್ಮ ನೃತ್ಯ ಸಂಗೀತ ಮೊದಲಾದ ಲಲಿತಕಲೆಗಳಿಗೆ ಅನ್ವಯಿಸಿ ಹೇಳುವಾಗ ಈ ಬಾನಿ, ಮಟ್ಟು, ತಿಟ್ಟುಗಳು ಗೋಚರಿಸುತ್ತವೆ. ಇವು ಒಂದು ವ್ಯವಸ್ಥೆಗೆ ಒಳಪಟ್ಟಾಗ ಬೇರೆ–ಬೇರೆ ಪ್ರಭಾವ, ಪ್ರಚಾರಗಳ ಕಾರಣದಿಂದ ಕೆಲವು ತಾತ್ಕಾಲಿಕವಾಗಿ ಬೆಳೆಯುತ್ತವೆ ಮತ್ತು ಅಳಿದು ಹೋಗುತ್ತವೆ. ಪರಸ್ಪರ ಪ್ರಭಾವ ಪಡೆಯುವಂತಹ ಕೊಡು–ಕೊಳ್ಳುವಿಕೆಗಳು ಇರುವುದಿದೆ. ಈ ಉಳಿಯುವಿಕೆ–ಅಳಿಯುವಿಕೆಗೆ ಜನಾಶ್ರಯ, ಅಧಿಕಾರದ ಆಶ್ರಯ, ಕಲಾವಿದರ ಆರಾಧನೆಯ ಶ್ರಮದಾನ ಮುಖ್ಯ ಹೇತು.

ನಮ್ಮತನದೊಳಗಿನ ತನ್ನತನಕ್ಕೆ ಉದಾಹರಣೆಯಾಗಿ : ಡಾ. ಶಿವರಾಮ ಕಾರಂತರ 'ಸೋಮಿಯ ಸೌಭಾಗ್ಯ' ಗೀತ ರೂಪಕವಾಗಿ ಕನ್ನಡದಲ್ಲಿ ರಂಗದ ಮೇಲೆ ಬಂದುದನ್ನು 'ಚುಲ್ಲೆಲ್ ತುಲ್ಲೆಲ್' (ಮದುವೆಯ ಕುಣಿತ) ಎಂಬುದಾಗಿ ಕಾರಂತರ ಒಪ್ಪಿಗೆ ಪಡೆದು ತುಳುವಿನಲ್ಲಿ ಭಾಷಾಂತರಿಸಿ ನೃತ್ಯರೂಪಕವಾಗಿ 'ದುಡಿ'ಯ ಹಿಮ್ಮೇಳದಲ್ಲಿ ಭರತನಾಟ್ಯ ಕಲಾವಿದರು ತುಳುನಾಡಿನ ಜಾನಪದ ಶೈಲಿಯಲ್ಲಿ ಪ್ರದರ್ಶನಗಳನ್ನಿತ್ತಾಗ ಅದೊಂದು ಹೊಸ ಶೈಲಿಯ ಪ್ರದರ್ಶನವಾಯಿತು. ಅಂತೆಯೇ ಅದೇ ಸಾಹಿತ್ಯವನ್ನು ಪ್ರದರ್ಶಿಸುವ ಬೇರೆ ಬೇರೆ ತಂಡಗಳು, ಬೇರೆ ಬೇರೆ ನಿರ್ದೇಶಕರ ಕಲ್ಪನೆಯೊಂದಿಗೆ, ಬೇರೆ–ಬೇರೆ ಸ್ಥಳಗಳಲ್ಲಿ ಪ್ರದರ್ಶಿಸಿದಾಗ ಪ್ರೇಕ್ಷಕರನ್ನು ಅನುಸರಿಸಿಯೂ ಅದರ ಪ್ರಭಾವ ಬೇರೆಯಾಗಿರುತ್ತದೆ. ಅಂತೆಯೇ ಜಯದೇವನ ಗೀತಗೋವಿಂದವನ್ನು ಶಾಸ್ತ್ರೀಯವೆನ್ನುವ ಮಾನ್ಯತೆ ಪಡೆದುಕೊಂಡ ಏಳು ನೃತ್ಯ ಸಂಪ್ರದಾಯಗಳಲ್ಲಿ ಪ್ರಯೋಗ–ಪ್ರದರ್ಶನವಾದಾಗಲೂ ಇದೇ ಬಗೆಯಲ್ಲಿ ವಿವಿಧತೆಯಿದೆ. ಅಂತೆಯೇ ಒಂದೇ ಗುರುಗಳಲ್ಲಿ ಕಲಿತ ಹತ್ತು ಮಂದಿ ಕಲಾವಿದರಲ್ಲಿ ಸ್ವಲ್ಪ ಸ್ವಲ್ಪವಾದರೂ ಭಿನ್ನತೆ ಇದ್ದೇ ಇರುತ್ತದೆ. ಆದರೆ ನರ್ತನವನ್ನು ಸಮೂಹವಾಗಿ ರಂಗದ ಮೇಲೆ ತಂದಾಗ ಈ ಭಿನ್ನತೆಯನ್ನು ಅಭಿನಯದ ಇತರ ಪರಿಕರಗಳು ಕಡಿಮೆ ಮಾಡಿಸಿಕೊಡುತ್ತದೆ.

ಒಬ್ಬನ ಹಾಗೆ ಇನ್ನೊಬ್ಬ ಇರುವುದಿಲ್ಲ. ಒಂದರ ಹಾಗೆ ಇನ್ನೊಂದು ಇರುವುದಿಲ್ಲ. ಒಬ್ಬನ ಬುದ್ಧಿ ಮಟ್ಟದಂತೆ ಇನ್ನೊಬ್ಬನದಿರುವುದಿಲ್ಲ. ಒಬ್ಬನ ದೇಹರಚನೆಯಂತೆ ಇನ್ನೊಬ್ಬನ ದೇಹವಿರುವುದಿಲ್ಲ. ಆದರೂ ಮಾನವರೆಲ್ಲಾ ಒಂದೇ ಎಂಬುದು ಕಲ್ಪನೆ. ಆದರೆ ಇಂತಹ ಭಿನ್ನತೆ, ಬೇರೆ ಬೇರೆ ಜಾತಿ, ಜನಾಂಗ, ಬುಡಕಟ್ಟು, ಬಣ್ಣ, ದೇಶ, ಭಾಷೆ, ರಚನೆ, ಧರ್ಮ, ಕರ್ಮಗಳಿಗನುಸಾರವಾಗಿ ಪ್ರತ್ಯೇಕಿಸಿ ನೋಡುವುದು ನಾವು ಗುರುತಿಸಿಕೊಳ್ಳುವ ಸೌಕರ್ಯಕ್ಕಾಗಿ. ಅಂತೆಯೇ ಕಾಲಕ್ಕೆ ಅನುಸಾರವಾಗಿ ಈ ಗುರ್ತಿಸುವ ಹೆಸರುಗಳು ಬದಲಾವಣೆಗೊಳ್ಳುತ್ತಾ ಬೇರೆ ಹೆಸರನ್ನು ಪಡೆಯುತ್ತದೆ. ಮೇಲ್ವರ್ಗ, ಕೆಳವರ್ಗ, ಶ್ರೀಮಂತ, ಬಡವ ಎಂದು ಸ್ಥಾನಗಳು ಮುಂದೆ–ಹಿಂದೆ ಸರಿಯುವುದೂ ಆಗುತ್ತದೆ. ಇದು ಮನುಷ್ಯನ ಹುಡುಕುವಿಕೆಯ ಫಲ.

**–ಕುದ್ಕಾಡಿ ವಿಶ್ವನಾಥ ರೈ, ಹಿರಿಯ ನೃತ್ಯ ಗುರುಗಳು, ಪುತ್ತೂರು., ದ.ಕ.**

**ಅಂಗಳದ ಮಾತು ತಿಂಗಳ ಚರ್ಚೆ**

# ನೃತ್ಯ ಮತ್ತು ದಲಿತರು : ಒಂದಷ್ಟು ಸಂದೇಹಗಳು

ಜ್ಯೇಷ್ಠ–ಆಷಾಢ ಸಂಚಿಕೆಯಲ್ಲಿನ **'ನೃತ್ಯ ಮತ್ತು ದಲಿತರು: ಒಂದು ವಿಶ್ಲೇಷಣೆ'** ಎಂಬ ಲೇಖನಕ್ಕೆ ಪ್ರತಿಕ್ರಿಯೆ.

ಲೇಖಕಿ, 'ವ್ರಾತ್ಯರು ಸಂಗೀತ ಮತ್ತು ನೃತ್ಯಗಳನ್ನು ಕೆಟ್ಟ ರೀತಿಯಲ್ಲಿ ಪ್ರಯೋಗಿಸುತ್ತಿದ್ದರು' ಎಂದಿದ್ದಾರೆ. ಹೀಗಿರುವಾಗ ಅವಹೇಳನದಿಂದ ಯಾವ ಕಲೆ ಉದ್ಧಾರವಾಗಿದೆ? ವ್ರಾತ್ಯರು ಇಂದಿನ ದಲಿತರೇ ಆಗಿದ್ದಾರೆ ಎಂದು ಲೇಖಕಿ ಹೇಳಬಯಸುವುದಾದರೆ ವ್ರಾತ್ಯರು ಬಳಸುತ್ತಿದ್ದ ಕಲೆ ಉನ್ನತ ಮಟ್ಟಕ್ಕೆ ಏರುವಲ್ಲಿ ಹೇಗೆ ಸಹಕಾರಿ ಎಂದು ಹೇಳಲು ಸಾಧ್ಯವಿದೆಯೇ? ಮುಂದೆ ಹೇಳಲಾದ 'ಭರತನ ಮಕ್ಕಳು ಶಾಪಕ್ಕೆ ಗುರಿಯಾಗುವುದು, ಕಳಂಕಿತರಾಗುವುದು' ಸಹ ಇದೇ ರೀತಿಯ ಸಂದೇಹಗಳನ್ನು ಹುಟ್ಟುಹಾಕುತ್ತದೆ. ಹಾಗಾದರೆ ಆ ಶಾಪಗ್ರಸ್ಥ ಮಕ್ಕಳು ಮತ್ತು ಅಥರ್ವವೇದ ಉಲ್ಲೇಖಿಸುವ ವ್ರಾತ್ಯರು ಇಂದಿನ ದಲಿತರೇ? ಅಲ್ಲವೆ? ಅವರ ಕೊಡುಗೆಯನ್ನು ವಿವರಿಸಿದರೆ ಸೂಕ್ತ. ಅಂತೆಯೇ ಭರತ ಮತ್ತು ಅವನ ಮಕ್ಕಳು ಬ್ರಾಹ್ಮಣರಾಗಿ ಹುಟ್ಟಿ ಬಂದವರು ಎಂಬುದನ್ನು ಪ್ರಸ್ತಾಪಿಸಿದ್ದೀರಿ. ಮತ್ತೊಂದೆಡೆ ಭರತ ಎಂಬುದಕ್ಕೆ 'ಶಬರ' ಅರ್ಥವಿದೆ ಯೆಂಬುದನ್ನು ಹೇಳಿದ್ದೀರಿ. ಇದರಿಂದ ಏನನ್ನು ಹೇಳಲು ಬಯಸುತ್ತಿರುವಿರಿ?



ಕಲೆ ಉಳಿದು ಬೆಳೆಯಲು ಅದಕ್ಕಾಗಿ ಶ್ರಮಿಸುವವರು ಬೇಕು. ಕಲೆಯನ್ನು ರಸಾಸ್ವಾದನೆಗೆ ಒಯ್ಯುವ ಗುರಿ ಹೊಂದಿರಬೇಕು. ಇಲ್ಲದಿದ್ದರೆ ನೃತ್ಯಕ್ಷೇತ್ರಕ್ಕೆ 'ಕೊಡುಗೆ' ಎಂದು ಪರಿಗಣಿಸಲು ಹೇಗೆ ಸಾಧ್ಯ? ಹಾಗಾಗಿ ಅವರ ಶ್ರಮವನ್ನು ಉದಾಹರಿಸುವುದಿದ್ದರೆ ಒಳಿತೇ ವಿನಾ; ಅನೌಚಿತ್ಯ ಬೆಳವಣಿಗೆಯನ್ನು ದಾಖಲಿಸುವುದರಿಂದಲ್ಲ. ಅಷ್ಟಕ್ಕೂ ಪ್ರತೀ ಜಾನಪದ ಮತ್ತು ಶಾಸ್ತ್ರೀಯವೆನಿಸಿಕೊಂಡ ನೃತ್ಯಗಳಿಗೆ ಅದರದ್ದೇ ಆದ ಹಿನ್ನಲೆಯಿದೆ. ಲೋಕದಲ್ಲಿರುವ ಪ್ರತೀ ಬುಡಕಟ್ಟುಗಳು ಶಾಸ್ತ್ರೀಯ ಸಂಗೀತ ಮತ್ತು ನೃತ್ಯದ ಬೆಳವಣಿಗೆಯಲ್ಲಿ ಪಾತ್ರ ವಹಿಸಿದುದೂ ಇದೆ. ಈ ಹಿನ್ನಲೆಯಲ್ಲಿ ಎಲ್ಲಾ ಬುಡಕಟ್ಟುಗಳನ್ನು ದಲಿತರು ಎಂದು ನಂಬಿ; ಅವರ ನೃತ್ಯಗಳು ಅವರ ಜೀವನ ಹಿನ್ನಲೆಯ ಪ್ರಮುಖ ಭಾಗ ಎಂದು ಹೇಳಿದರೆ; ಉಳಿದ ವರ್ಗಗಳಿಗೂ ನಾವಿದನ್ನು ಅನ್ವಯಿಸಿ ಮಾತಾಡಬಹುದಲ್ಲವೇ? ಸೂಕ್ತ ಆಧಾರಗಳ ಸಹಿತ ಸಂದೇಹಗಳಿಗೆ ಉತ್ತರಿಸಿ.

**– ನಿವೇದಿತಾ ಶ್ರೀನಿವಾಸ್, ನೃತ್ಯ ಸಂಶೋಧಕರು, ಬೆಂಗಳೂರು.**

f

**ಅಂಗಳದ ಮಾತು ತಿಂಗಳ ಚರ್ಚೆ**

# ಭಕ್ತಿ ಶೃಂಗಾರ v/s ಶೃಂಗಾರ

**ಪ್ರಾಮಾಣಿಕ ಪ್ರೇಮವನ್ನು ನಿತ್ಯ ಜೀವನದಲ್ಲಿ ತೋರಿಸಲಾರದವರು 'ಆಧ್ಯಾತ್ಮಿಕ ಪ್ರೇಮ'ವನ್ನು ನೃತ್ಯದಲ್ಲಿ ತೋರಿಸುತ್ತಾರೆಯೇ? ಅಂತರಂಗದಲ್ಲಿ ಆಧ್ಯಾತ್ಮವಿದ್ದರೆ ಮಾತ್ರ ಅದು ಕುಣಿತದಲ್ಲೂ ಬಂದೀತು.**

**...ಕೃ**ಷ್ಣ ರಾಧೆಯರ ಪ್ರೇಮವನ್ನು ಮಧುರಭಾವ ಎಂದು ಕರೆಯುತ್ತಾರೆ. ಈ ಕಲ್ಪನೆಯೆಂಬುದು ಆಧ್ಯಾತ್ಮದಿಂದ ಮೊದಲು ಬಂದಿತೇ? ಆಧ್ಯಾತ್ಮ ಎಂಬುದು ಪ್ರೇಮಕ್ಕೆ ನಮ್ಮ ಜೀವನದಿಂದ ಇದೊಂದು ಉಪಮೆಯಾಗಿ ಹೋಯಿತೇ–ಎಂಬುದು ಕೂಡಾ ಒಂದು ಸಮಸ್ಯೆಯೇ. ಶಿಲ್ಪದಲ್ಲಿ, ನೃತ್ಯದಲ್ಲಿ, ಚಿತ್ರಗಳಲ್ಲಿ ಕೃಷ್ಣ ಮತ್ತು ರಾಧೆಯರ ಸಂಕೇತವನ್ನು ಇರಿಸಿಕೊಂಡು ಆತ್ಮ, ಪರಮಾತ್ಮರ ಪರಸ್ಪರ ಆಕರ್ಷಣೆಯನ್ನು ಚಿತ್ರಿಸುವುದಕ್ಕೆ ನಮ್ಮವರು ಪ್ರಯತ್ನಿಸಿದ್ದಾರೆ. ಶಿಲ್ಪದಲ್ಲಾಗಲೀ, ಕಾವ್ಯದಲ್ಲಾಗಲೀ ಈ ಸಂದರ್ಭಗಳಲ್ಲಿ ಬಳಸುವ ಹಲವು ಮಾತುಗಳು, ವರ್ಣನೆಗಳು, ಉಪಮೆಗಳು, ಬಾಹ್ಯ ಸಾಧನಗಳು. ಅವು ಸಾಕಷ್ಟು ಕಾಮ ಸೂಚಕವಾದುವೇ. ಅಂತರಂಗದಲ್ಲಿ ಹುದುಗಿದ ಪ್ರೇಮದ ಗುಣವನ್ನು ಯಾರು ಬಲ್ಲವರು? ಅದು ಆತ್ಮ, ಪರಮಾತ್ಮರ ಮಿಲನ ಬಯಸುವಂಥಾದ್ದು – ಅದಕ್ಕೆ ಉದಾಹರಣೆಯಾಗಿ ಲೌಕಿಕಾನುಭವದಿಂದ ಹೆಣ್ಣು ಮತ್ತು ಗಂಡು, ಗಂಡ ಹೆಂಡತಿ, ಪ್ರಣಯಿ–ಪ್ರೇಯಸಿಗಳ ಮಿಲನವನ್ನು ಸಾಂಕೇತಿಕವಾಗಿ ಸೂಚಿಸುವಂತೆ ಕಾಣುತ್ತದೆ. ಹಿಂದೊಂದು ಕಾಲದಲ್ಲಿ ಇಂಥ ಸಂಕೇತಗಳು ಅಸಹ್ಯ ಅಥವಾ ಅಶ್ಲೀಲ– ಎನಿಸಿಕೊಂಡಿರಲಾರವು. ಅವು ಆಶ್ಚರ್ಯವನ್ನೂ ಹುಟ್ಟಿಸಲಿಲ್ಲ. ಮುಂದೆ ಅವೇ ವಿವಾರಗಳಿಗೆ ಅರ್ಥ ವಿಶೇಷ ಬರತೊಡಗಿದ್ದರಿಂದ, ಇಂಥ ಚಿತ್ರಗಳಿಗೆ ನೈಸರ್ಗಿಕ ಇಲ್ಲವೇ ಲೌಕಿಕ ಅರ್ಥವೇ ಇದ್ದಿರಲಿಲ್ಲ–ಎಂದು, ನೈಜಭಾವಗಳ ಅರ್ಥವನ್ನು ನಿರಾಕರಿಸುವುದಕ್ಕೆ ಹೊರಟಿರಬೇಕು. ಗಂಡಹೆಂಡಿರ ಅನ್ಯೋನ್ಯವನ್ನು ಮತ್ತು ಅವರ ಪ್ರೇಮವನ್ನು ಭಕ್ತ ಮತ್ತು ಇಷ್ಟದೇವತೆಯ ಪ್ರೇಮಕ್ಕೆ ಹೋಲಿಸಿದ್ದರಿಂದ ಏನೂ ಅಪರಾಧವಾಗದು. ಹಾಗೆ, ನಾವು ಲೌಕಿಕದ ಸಂಬಂಧವನ್ನು ಕಳೆದು ಕೊಂಡವರಾದಲ್ಲಿ ಆತ್ಮ–ಪರಮಾತ್ಮಗಳ ಕಲ್ಪನೆಯೇ ಅಸಾಧ್ಯವಾಗಿಬಿಡುತ್ತದೆ. ಅದು ಸಾಧ್ಯವಾದರೆ ಮಾತ್ರ ಆಧ್ಯಾತ್ಮವೂ ಸಾಧ್ಯ. ಲೌಕಿಕದಲ್ಲಿರುವ ಚೆಲುವು ಸೊಗಸುಗಳನ್ನು ಅತಿಕರಿಸಿ ಕಾಣುವ ದೃಷ್ಟಿಯೇ ಮಧುರಭಾವ ಎನಿಸುತ್ತದೆ ನನಗೆ...

**( 'ಒಂಟಿ ದನಿ' ಕಾದಂಬರಿ– ಅನಂತಕೃಷ್ಣನ ಪಾತ್ರದ ಮೂಲಕವಾಗಿ )**

**–ದಿ॥ ಡಾ. ಕೆ. ಶಿವರಾಮ ಕಾರಂತ**

f

**ನಮ್ಮೊಂದಿಗೆ ಬಳಗದಲ್ಲಿ...**



**ಧರ್ಮದರ್ಶಿ ಹರಿಕೃಷ್ಣ ಪುನರೂರು,** ಮಂಗಳೂರು.
**ಸುಧಾಕಿರಣ್ ಅಧಿಕಶ್ರೇಣಿ,** ಬೆಂಗಳೂರು.

# ದರ್ಪಣ

## ನೃತ್ಯರಂಗದ ಅನಭಿಷಿಕ್ತ ರಾಣಿ : ರುಕ್ಮಿಣಿ

(ಹೆಜ್ಜೆ : 13 )

*ಕಳೆದ ಸಂಚಿಕೆಯಿಂದ...*



(ಆರ್ಥಿಕ ಅನನುಕೂಲತೆಗಳಿದ್ದಾಗ್ಯೂ ರುಕ್ಮಿಣಿ ಅವರೊಂದಿಗೆ ದುಡಿಯಲು ಜನರು ಕಾತರಿಸುತ್ತಿದ್ದರು. ಮದ್ರಾಸ್ ಕಾರ್ಪೋರೇಷನ್‌ನ್ನು ವಿನಂತಿಸಿ ಕಲಾಕ್ಷೇತ್ರದ ಸುತ್ತಲೂ ರಸ್ತೆ ಮುಂತಾದ ಸೌಲಭ್ಯಗಳನ್ನು ಕಲಿಸ್ಪಲು ಶ್ರಮಿಸಿದರು. ಇಂದಿಗೆ ಅದು ಬೆಸೆಂಟ್ ನಗರದದ ಭಾಗವಾಗಿ, ಕಲಾಕ್ಷೇತ್ರ ಕಾಲೋನಿ ಎಂದೇ ಆ ವಲಯ ಹೆಸರಾಗಿದೆ. 1958ರ ನಂತರ ಕಲಾಕ್ಷೇತ್ರ ಕಲರ್ ಲ್ಯಾಬೋರೇಟರಿಯನ್ನು ಸ್ಥಾಪಿಸಿತ್ತು. ನಂತರ ದೊಡ್ಡ ದೊಡ್ಡ ಪತ್ರಿಕೆಗಳೂ ಭೇಟಿ ನಾಡುವ ಫೋಟೋಗ್ರಫಿ ಲ್ಯಾಬ್ ಆಗಿ ಬೆಳೆದು ಸ್ವಲ್ಪ ದಿನಗಳಲ್ಲಿ ಮುದ್ರಣವೂ ಶುರುವಾಯಿತು. ಪಠ್ಯ ಮತ್ತು ಬೇರೆ ಪುಸ್ತಕಗಳ ಪ್ರಕಟಣೆಯ ಕಾರ್ಯವೂ ಆರಂಭವಾಗಿ ಕಲಾಕ್ಷೇತ್ರ ಪಬ್ಲಿಕೇಷನ್ ಬೆಳೆದುಬಂತು. ಸ್ವಾಮಿನಾಥನ್ ಗ್ರಂಥಾಲಯದ ಮೂಲಕ ಶಾಸ್ತ್ರ ಕಲಿಕೆಗೆ ಅನುಕೂಲವಾಯಿತು. ಇಂದಿನ ಕಾಲಕ್ಕೆ ದೇಶದ ಪ್ರತಿಯೊಂದು ಕಾಲೇಜು–ವಿದ್ಯಾಸಂಸ್ಥೆಗಳು ತಮಗೆ ಸ್ವಾಯತ್ತ ವಿಶ್ವವಿದ್ಯಾನಿಲಯದ ಸ್ಥಾನ ಬೇಕೆಂದು ಆಗ್ರಹಿಸುವಾಗ; ಒಂದು ಕಾಲಕ್ಕೆ ಕಲಾಕ್ಷೇತ್ರವನ್ನು ಡೀಮ್ಡ್ ವಿಶ್ವವಿದ್ಯಾಲಯ ಮಾಡಲು ಯುಜಿಸಿಯೇ ಪ್ರಸ್ತಾಪವನ್ನು ಇಟ್ಟು ಮೀಟೀಂಗ್ ಕರೆದಾಗ ರುಕ್ಮಿಣಿ ಖಡಾಖಂಡಿತವಾಗಿ ವಿನಯವಾಗಿಯೇ ನಿರಾಕರಿಸಿದ್ದರು. ಕಲಾಕ್ಷೇತ್ರ ಪೂರ್ಣವಾಗಿ ಸರ್ಕಾರದ ಅಧೀನವಾಗುವುದು ರುಕ್ಮಿಣೀಗೆ ಮನಸ್ಸಿರಲಿಲ್ಲ.)

ತಿರುನಲ್ವೇಲಿಯ ಕುಟ್ರಾಲಂ ಗ್ರಾಮದ ತಿರಿಕ್ಕುಡ ರಾಸಪ್ಪ ಕವಿರಾಯರ್ ತಿರುಕೂಡನಾಥ ದೇವರ ಬಗ್ಗೆ 1718ರಲ್ಲಿ ಬರೆದ ದೇವದಾಸಿಯರಷ್ಟೇ ಮಾಡುತ್ತಿದ್ದ ಏಕವ್ಯಕ್ತಿ ಅಭಿನಯದ ಕುಟ್ರಾಲ ಕೊರವಂಜಿಗೆ ಹೊಸ ಸ್ಪರ್ಶವನ್ನಿತ್ತದ್ದು ಅವರು ತೋರಿದ ಕೈಮರ. ತಮಿಳ್ನಾಡಿನ 18ನೇ ಶತಮಾನದ ಸಂಗೀತ ಪದ್ಧತಿ ಇದಾಗಿದ್ದರೂ ಮೊದಲೆಲ್ಲಾ ಕುಟ್ರಾಲಂನ ದೇವಸ್ಥಾನಗಳಲ್ಲಿ, ಬೃಹದೀಶ್ವರ ದೇವಾಲಯದ ನವರಾತ್ರಿ ಉತ್ಸವದಲ್ಲಿ ಕೊರವಂಜಿಯನ್ನು ಪ್ರದರ್ಶಿಸಲಾಗುತ್ತಿದ್ದರೂ, ದೇವದಾಸಿ ಕಾಯ್ದೆ ಬಂದ ನಂತರ ಕುಂಠಿತವಾಯಿತು. ಪುನಃ ಕೊರವಂಜಿಯನ್ನು ಪುನರುಜ್ಜೀವನಗೊಳಿಸಿದ್ದು ರುಕ್ಮಿಣೀ 1944ರಲ್ಲಿ. 'ಕೊರವಂಜಿಯನ್ನು ಅಷ್ಟಾಗಿ ಯಾರು ಗಮನಿಸದಿದ್ದ ಕಾಲಕ್ಕೆ ; ಗೌರವದಿಂದ ನೋಡುವಂತೆ ಮಾಡಿ, ಶಾಲಾ ಕಾಲೇಜುಗಳಲ್ಲಿ ಪಠ್ಯವೆಂಬಂತೆ ತಂದವರು ರುಕ್ಮಿಣೀ' ಎನ್ನುತ್ತಾರೆ ವಿದ್ವಾಂಸ ಪೀಟರ್ಸನ್.

ಕೊರವಂಜಿಯು 300 ವರ್ಷಕ್ಕಿಂತಲೂ ಹಳೆಯ ಪ್ರದರ್ಶಕ ಕಲೆ. ಭಾಗವತ ಮೇಳದಂತೆಯೇ ಉಪರೂಪಕದ ಪರಂಪರೆಯನ್ನು ಮುಂದುವರೆಸಿಕೊಂಡು ಬಂದ ಚಿತ್ರಕಾವ್ಯದ ಸೊಬಗು. ವಿಪ್ರಲಂಭ ಶೃಂಗಾರದ ಎಳೆ. ಗೀತಗೋವಿಂದದ ಪ್ರಭಾವ ಇದರಲ್ಲಿ ಕಂಡುಬರುತ್ತದೆ. ಕಟ್ಟೈಕಾರನ್ ಎಂಬ ಕಥನ ನಿರೂಪಣೆ ಮಾಡುವ ಪುರುಷನನ್ನು ಹೊರತುಪಡಿಸಿದರೆ ಸ್ತ್ರೀಯರಿಂದಷ್ಟೇ ಪ್ರದರ್ಶಿಸಲ್ಪಡುವ ರೂಪಕ. ದೇವಸ್ಥಾನಗಳಲ್ಲಿ ಹೆಚ್ಚು ಪ್ರದರ್ಶಿಸಲ್ಪಡುತ್ತಿದ್ದ, ಮರಾಠರು, ನಾಯಕರು, ಚೋಳರ ಕಾಲದಲ್ಲಿ ಪ್ರವರ್ಧಮಾನದಲ್ಲಿದ್ದ ಕಲೆಯಿದು. ಅದರಲ್ಲೂ ಮರಾಠಾ ದೊರೆ ಶಹಜಿಯ ಕಾಲದಲ್ಲಿ ತ್ಯಾಗೇಶರ್ ಕೊರವಂಜಿಯು ತಿರುವಾರೂರು ದೇವಸ್ಥಾನಗಳಲ್ಲಿ ಪ್ರದರ್ಶಿಸಲಾಗುತ್ತಿತ್ತು. ಅದರಲ್ಲೂ ತುಳಜಾಜಿ ಮತ್ತು ಎರಡನೇ ಸರ್ಫೋಜಿಯ ಕಾಲದಲ್ಲಿ ಕೊರವಂಜಿಯ ಬೆಳವಣಿಗೆಯಾಯಿತು. ದಿದ್ದಿತ್ತೈ ಅಡವು ಜಾರಿಗೆ ಬಂದದ್ದು ಈ ಕಾಲದಲ್ಲೆ. ಇದನ್ನು ಕೊರವಂಜಿ ನೃತ್ಯಗಳಲ್ಲಿ, ಬ್ರಹ್ಮೋತ್ಸವದಂಥಹ ಉತ್ಸವಗಳಲ್ಲಿ ಬಳಸುತ್ತಿದ್ದರು.

ತಮಿಳಿನಲ್ಲಿ ಕುರವ ಎಂದರೆ ಬುಡಕಟ್ಟು ಜನಾಂಗ. ವಂಜಿ ಎಂದರೆ ಭವಿಷ್ಯ ನುಡಿಯುವ ಬೆಟ್ಟ ಪ್ರದೇಶದ ಸ್ತ್ರೀ. ರೂಪಕವು ಸಾಹಿತ್ಯ, ಸಂಗೀತ, ನಾಟಕವನ್ನು ಅಳವಡಿಸಿದುದ್ದಾಗಿದ್ದು; ಕುರತ್ತಿ ಎಂಬ ಸ್ತ್ರೀಯಿಂದ ಕುರತ್ತಿಪಟ್ಟು ಎಂಬ ಭವಿಷ್ಯ ಹೇಳುವ ಹಾಡು ಹೊಸೆಯಲಾಗುತ್ತದೆ. ಕಟ್ಟೈಕ್ಕಾರನ್ ಎಂಬ ಸೂತ್ರಧಾರ ಬಂದು ನಾಟಕದ ಉದ್ದೇಶ ಮತ್ತು ಕಥೆ ವಿವರಿಸುವನು. ಅವನು ವಿನಾಯಕನ ವೇಷದಲ್ಲಿ ಬರುವ ಸಂಪ್ರದಾಯವೂ ಇದೆ. ಸಿಂಗನ್ ಮತ್ತು ಸಿಂಗಿ ಎಂಬ ಈರ್ವರ ಮಾತುಗಳು ಸಂಗೀತಮಯವಾಗಿ ಕೂಡಿದ್ದು ನಾಟಕೀಯವೆನಿಸುವ ಜತಿ ನಿರೂಪಣೆ, ಸಾವೇರಿ ಮುಂತಾಗಿ ರಕ್ತಿ ರಾಗಗಳ ಬಳಕೆ, ಸೂಕ್ತ ಪಾತ್ರಪ್ರವೇಶ ಧರು, ಸಂವಾದ ಧರುಗಳ ಉಪಯೋಗ, ಆದಿ–ಮಿಶ್ರ ಛಾಪು–ತಿಶ್ರ ಏಕತಾಳ, ವಿಳಂಬ,ಮಧ್ಯ ಕಾಲ ಇದರ ಚಹರೆಗಳು. ಉತ್ತಮ, ಮುಗ್ಧಾ ನಾಯಿಕೆಯ ಮಧುರ ಭಕ್ತಿಯ ಸಂಚಾರಿ ಅಭಿನಯ. ನಾಯಿಕೆ ದೇವರ ಮೆರವಣಿಗೆಯಲ್ಲಿ ದೇವರನ್ನು ನೋಡಿ ಪ್ರೇಮಿಸಿ ವಿರಹದಲ್ಲಿರುವಾಗ ಸಖಿಯರು ಆಕೆಯನ್ನು ಸಂತೋಷವಾಗಿರಿಸಲು ಪ್ರಯತ್ನಿಸುವುದು; ಕುರತಿಯನ್ನು ಕರೆದುಕೊಂಡು ಬಂದು ಕೈ ನೋಡಿ ಭವಿಷ್ಯ ಹೇಳಿಸಿ ನಾಯಿಕೆಯನ್ನು ತೃಪ್ತಿಪಡಿಸುವುದು ಇದರ ವಸ್ತು. ಕೆಲವು ಕೊರವಂಜಿಗಳಲ್ಲಿ ಸಿಂಗ ಮತ್ತು ಸಿಂಗಿ ಬೇಟೆಗೆ ಹೋಗುವ, ಅಲ್ಲಿ ಅವರಿಬ್ಬರ ವಿರಸ–ಪ್ರಣಯಗಳ ನಿರೂಪಣೆಯೂ ಇದೆ.



ತಮಿಳು ಸಾಹಿತ್ಯದ ಪ್ರಮುಖ ಅಂಗಗಳಲ್ಲಿ ಒಂದಾದ ಉಳ ಮತ್ತು ಕುರಂ ಎಂಬ ಪ್ರಬೇಧಗಳ ಪ್ರಭಾವ ಇದರಲ್ಲಿ ಸಾಕ್ಷ್ಯಿದೆ. ದರುಪದಿ ಕುರಂ, ಮೀನಾಕ್ಷಿಯಮ್ಮೈ ಕುರಂ, ಭವಾನಿ ಕುರಂಗಳು ಕೊರವಂಜಿಯ ಜನಕರು. ಅದರೊಂದಿಗೆ ಕುಲಾವನಾಟಕಂ ಎಂಬ ಮತ್ತೊಂದು ಪ್ರಬಂಧವು ಕೊರವಂಜಿಯ ರೂಪಿಗೆ ಕಾರಣವಾಗಿರುವುದರಿಂದ ಕೊರವಂಜಿಯನ್ನು ಪ್ರಬಂಧಗಳ ಸಾಲಿಗೆ ಸೇರಿಸಲಾಗಿದೆ. ಕನ್ನಡ, ತೆಲುಗು, ಮರಾಠಿ, ಮಲಯಾಳ, ಗುಜರಾತಿ ಮುಂತಾದ ಭಾಷೆಗಳನ್ನೂ ಒಳಗೊಂಡಂತೆ 60ಕ್ಕಿಂತಲೂ ಹೆಚ್ಚಿನ ಕೊರವಂಜಿಗಳಿವೆ. ಬಹುಪಾಲು ಶೈವಾನುಯಾಯಿ ವಸ್ತುಗಳಿರುವ ಕೊರವಂಜಿಯ ಪೈಕಿ ತ್ಯಾಗೇಶರ್ ಕೊರವಂಜಿಯು ಮತ್ತು ಕವಿರಾಯರ್ ಎಂಬ ಶಹಜಿ ಆಸ್ಥಾನದ ಕವಿ ಬರೆದಿರುವ ಊಹೆ. 1840ರಲ್ಲಿ ಕವಿ ಕುಂಜರ ಭಾರತಿ ಬರೆದ ಅಳಗರ್ ಕೊರವಂಜಿ ಮಾತ್ರ ವೈಷ್ಣವ ಸಂಪರದಾಯದ್ದು. ಸುಂದರರಾಜ ಪೆರುಮಾಳ್ ಎಂಬ ದೇವರು ಮಧುರೈ ಅಳಗರ್ ದೇವಸ್ಥಾನದಲ್ಲಿ ಮೆರವಣಿಗೆಯಲ್ಲಿ ಬಂದಾಗ ಮೋಹನವಳ್ಳಿಯೆಂಬ ನಾಯಿಕೆಯು ದೇವರನ್ನು ನೋಡಿ ಪ್ರೇಮಪಾಶಕ್ಕೆ ಸಿಲುಕುವುದು ಇದರ ಕಥಾವಸ್ತು.

ಪಾಪನಾಶಂ ಮೊದಲಿಯಾರ್‌ರಿಂದ ಕುಂಭಕೋಣದ ಶಿವನ ಬಗ್ಗೆ ರಚಿಸಲ್ಪಟ್ಟ ಕುಂಭೇಶ್ವರ ಕೊರವಂಜಿಯನ್ನು ಸೂಲಮಂಗಲಂ ದೇವಸ್ಥಾನದಲ್ಲಿ 1835–1875ರವರೆಗೆ ನರ್ತಿಸಲಾಗುತ್ತಿತ್ತು. ವಸಂತೋತ್ಸವದ ನಾಲ್ಕನೇ ದಿನ ಭಾಗವತ ಮೇಳಗಳೊಂದಿಗೆ ದೇವದಾಸಿಯರು ಈ ಕೊರವಂಜಿಯನ್ನು ನರ್ತಿಸುತ್ತಿದ್ದರು. ತಿರುಚೆಂದೂರ್ ದೇವಾಲಯದ ದೇವರ ಮೇಲಿರುವ ರಚನೆ ಸೆಂದಿಲ್ ಕೊರವಂಜಿ. ಇಲ್ಲಿನ ನಾಯಿಕೆ ಮದನಮೋಹಿನಿ ಷಣ್ಮುಖನ ಕುರಿತು ಮೋಹಿತಳಾಗುತ್ತಾಳೆ. 1880ರಲ್ಲಿ ನವಳಾರ್‌ರಿಂದ ರಚಿಸಲ್ಪಟ್ಟ ಕಣ್ಣಪ್ಪರ್

ಕೊರವಂಜಿ ಕಥಾಕಾಲಕ್ಷೇಪದ ಸಂಕೀರ್ತನೆ ಮಾದರಿಯಲ್ಲಿದ್ದು ಕನ್ನಡ ಸಾಹಿತ್ಯವು ಹೇಳುವ ಬೇಡರ ಕಣ್ಣಪ್ಪನ ಕಥೆಯ ಧಾಟಿಯಲ್ಲಿದೆ. ಕೊರವಂಜಿಯ ಚೌಕಟ್ಟಿನಿಂದ ಪ್ರತ್ಯೇಕ ವಸ್ತುವಾದ ಇದರಲ್ಲಿ ನಾಯಿಕೆಯಿಲ್ಲ. ಶೃಂಗಾರಕ್ಕಿಂತ ಭಕ್ತಿಯ ಬಳಕೆ ಹೆಚ್ಚಿದ್ದು ; ಕಣ್ಣಪ್ಪನೇ ನಾಯಕನಾಗಿ ಅಭಿನಯಿಸುತ್ತಾನೆ. ಶಾಸ್ತ್ರೀಯ ಮತ್ತು ಜಾನಪದ ತಮಿಳಿನ ಬಳಕೆ ಇಲ್ಲಿ ಹೆಚ್ಚಿದೆ.



**ಕಣ್ಣಪ್ಪರ್ ಕೊರವಂಜಿ**

ಕೆಲವೊಂದು ಕೊರವಂಜಿಗಳು ಜಮೀನ್ದಾರರ ಮೇಲೆ, ರಾಜರ ಮೇಲೆ ರಚಿತವಾಗಿದ್ದು ಅವುಗಳ ಪೈಕಿ ವಿರಳಿಮಲ್ಲೈ ಕೊರವಂಜಿಯೂ ಒಂದು. ಇದು ಶರಭೇಂದ್ರ ಭೂಪಾಲ ಸರ್ಫೋಜಿಯ ಕುರಿತಾದದ್ದು. ಕೊಟ್ಟಯ್ಯೂರ್ ದೇಸಿಕರ್ ಬರೆದ ಈ ಕೊರವಂಜಿಯಲ್ಲಿ ಸಂಸ್ಕೃತ ಪದಗಳ ಬಳಕೆ ಹೆಚ್ಚು. ಇದನ್ನು ಪೊನ್ನಯ್ಯ ಪಿಳ್ಳೈ ನೃತ್ಯ ಸಂಯೋಜನೆ ಮಾಡಿದ್ದರಂತೆ. ಇಂದಿಗೂ ಬೃಹದೇಶ್ವರ ದೇವಸ್ಥಾನದ ಬ್ರಹ್ಮೋತ್ಸವದಲ್ಲಿ ಇದನ್ನು ನರ್ತಿಸುವ ಪರಿಪಾಠವಿದ್ದು; ತಂಜಾವೂರಿನ ಆಸ್ತಿಯೆಂಬಂತೆ ಈ ಕೊರವಂಜಿಯನ್ನು ಪರಿಗಣಿಸುತ್ತಾರೆ. ಒಂದು ಕಾಲಕ್ಕೆ ದೇವಸ್ಥಾನದ ಹೊರತಾಗಿ ಹೊರಗೆಲ್ಲೂ ಅದನ್ನು ನರ್ತಿಸುವ ಹಾಗಿರಲಿಲ್ಲ. ಈ ಕಟ್ಟು ಸಂಪ್ರದಾಯ 1950ರ ವರೆಗೂ ಚಾಲ್ತಿಯಲ್ಲಿತ್ತು. ಆದರೆ ಆರ್.ಕೆ. ಷಣ್ಮುಗಂ ಚೆಟ್ಟಿ ಈ  ಪರಂಪರೆಗೆ ನಾಂದಿ ಹಾಡಿದ ನಂತರ ಬಾಲಸರಸ್ವತಿ, ಮೃಣಾಲಿನಿ ಸಾರಾಭಾಯ್ ನರ್ತಿಸಿದ್ದಾರೆ. ಕರ್ನಾಟಕದಲ್ಲಿ ಕೊರವಂಜಿ ಪರಂಪರೆಯ ಶ್ರೀಮಂತಿಕೆಯಿದ್ದರೂ ; ತಮಿಳಿನಷ್ಟು ಪ್ರಸಿದ್ಧಿ ಪಡೆದಿಲ್ಲ ಎನ್ನುವುದು ದುರಂತವೇ ಸರಿ. ಪ್ರಚಲಿತ ಬಹಳಷ್ಟು ಕನ್ನಡ ಕೊರವಂಜಿಗಳು ತಮಿಳಿನ ಅನುವಾದವೇ ಆಗಿರುವುದು ಮತ್ತೊಂದು ವಿಪರ್ಯಾಸ.

ದಂಡಾಯುಧ ಪಾಣಿ ಪಿಳ್ಳೈ ಚಿತ್ರಾಂಬಲ ಕೊರವಂಜಿ ಬರೆದಿದ್ದು; ಇಂದಿಗೂ ಅವರ ಶಿಷ್ಯರು ನರ್ತಿಸುವುದನ್ನು ರೂಢಿಸಿಕೊಂಡಿದ್ದಾರೆ. ಕೃಷ್ಣಪುರಿ ಕೊರವಂಜಿ 1971ರಲ್ಲಿ ರುಕ್ಮಿಣೀ ಸಂಯೋಜಿಸಿದರು. ನಂತರ ವೈಜಯಂತಿ ಮಾಲಾ ಅಳಗರ್ ಕೊರವಂಜಿಯನ್ನು ಸಂಯೋಜಿಸಿದರೆ, ಪದ್ಮಾ ಸುಬ್ರಹ್ಮಣ್ಯಂ ವಿರಳಿಮಲ್ಲೈ ಕೊರವಂಜಿಯನ್ನು ವಿನ್ಯಾಸ ಮಾಡಿದ್ದಾರೆ. 1977 ರಲ್ಲಿ ಗುಜರಾತಿ ಭಾಷೆಯಲ್ಲಿ ಸೌರಾಷ್ಟ್ರದ ಸೋಮನಾಥನ ಕುರಿತಾಗಿಯೂ ಚಂದ್ರಮೌಳೀಶ್ವರ ಕೊರವಂಜಿಯನ್ನು ರುಕ್ಮಿಣಿಯ ಶಿಷ್ಯೆ ಅಂಜಲಿ ಮರ್ಹ್ ರಚನೆ ಮಾಡಿ ಸಂಯೋಜಿಸಿದ್ದಾರೆ.

ದೇವಸ್ಥಾನ ಮತ್ತು ರಾಜರ ಆಸ್ಥಾನದಿಂದ ಧಿಕ್ಕರಿಸಲ್ಪಟ್ಟ 18ನೇ ಶತಮಾನದ ಸಾಹಿತ್ಯ ಕೃತಿಯನ್ನು 20ನೇ ಶತಮಾನದ ಮಧ್ಯಭಾಗದಲ್ಲಿ ಪಾರಂಪರಿಕ ರಂಗಕಲ್ಪನೆಯನ್ನು ಮೀರದೆ ಸಮಕಾಲೀನವೆನಿಸುವಂತೆ ಮೊದಲು ಅಭಿವ್ಯಕ್ತಿಸಿದ್ದು ರುಕ್ಮಿಣಿ ; ಸಾಹಿತ್ಯ, ನೃತ್ಯ, ನಾಟಕ, ಸಂಗೀತವನ್ನು ಎಚ್ಚರಿಕೆಯಿಂದ ಬಳಸಿ ಸ್ವಯಂ ಚಿಂತನೆಯಲ್ಲಿ ರೂಪುಗೊಂಡ ಈ ನೃತ್ಯರೂಪಕದಲ್ಲಿ ದೇವದಾಸಿಯರ ಪರಂಪರೆಯಿಂದ ಬಂದವರಲ್ಲದ ಕಲಾವಿದರನ್ನು ಒಗ್ಗೂಡಿಸಿ ಕ್ರಮವತ್ತಾದ ಪದಗಳ ಬಳಕೆ, ಪ್ರವೇಶ–ನಿರ್ಗಮನಗಳಲ್ಲಿ ಅಚ್ಚುಕಟ್ಟುತನ, ಹೊಸ ಬಗೆಯ ಸಂಗೀತ, ಹೊಸ ವಸ್ತ್ರವಿನ್ಯಾಸ, ಬೆಳಕನ್ನು ಸಂಯೋಜಿಸಲಾಗಿತ್ತು.. ಇದೇ ಕಾರಣಕ್ಕಾಗಿ ಕೊರವಂಜಿ ಅವರ ಜೀವಮಾನದ ಶ್ರೇಷ್ಠ ಪ್ರದರ್ಶಕ ಕೃತಿಯೆಂದು ಕರೆಸಿಕೊಂಡಿತ್ತು.

(ಸಶೇಷ.)

f




# ಅರವತ್ತಾರರಲ್ಲೂ ಅಬ್ಬರಿಸುತ್ತಿರುವ ಅಭಿಮನ್ಯು !

* ರಾಕೇಶ್‌ಕುಮಾರ್ ಕಮ್ಮಜೆ

ಪುತ್ತೂರು ಶ್ರೀಧರ ಭುಡಾರಿ ಎಂದರೆ ರಂಗಸ್ಥಳವೂ ಒಮ್ಮೆ ಜಿಗಿಯುತ್ತದೆ! ಅವರೊಮ್ಮೆ ರಂಗಕ್ಕೆ ಬಂದರೆ ಸಾಕು ರಂಗವೇ ಉನ್ಮಾದಗೊಳ್ಳುತ್ತದೆ. ಸುಸ್ತೇ ಅರಿಯದ ಕಲಾವಿದ ಅವರು. ಹಾಗಾಗಿಯೇ 'ಸಿಡಿಲ ಮರಿ', 'ಪುಂಡುವೇಷದ ಗಂಡುಗಲಿ' ಎಂಬೆಲ್ಲಾ ಬಿರುದುಗಳು ಅವರಿಗೆ ಸಂದಾಯವಾಗಿವೆ. ಇಂದಿಗೂ ಸಕ್ರಿಯವಾಗಿ ರಂಗದಲ್ಲಿ ತೊಡಗಿಸಿಕೊಳ್ಳುತ್ತಿರುವ ಭುಡಾರಿಯವರ ವಯಸ್ಸು ನಾಡಿದ್ದು ಅಕ್ಟೋಬರ್ ಒಂದಕ್ಕೆ ಅರವತ್ತಾರು!



ಬೇರೆಲ್ಲಾ ಪಾತ್ರಗಳಲ್ಲಿ ಸಾಕಷ್ಟು ಮಿಂಚಿರುವುದು ಹೌದಾದರೂ ಭುಡಾರಿಯವರ ಹೆಸರು ಕೇಳಿದಾಕ್ಷಣ ನೆನಪಾಗುವುದು ಅಭಿಮನ್ಯು. ಜೊತೆಜೊತೆಗೇ ಬಭ್ರುವಾಹನ, ಪರಶುರಾಮ, ಚಂಡ ಮುಂಡ, ಬಾಲಲೀಲೆಯ ಕೃಷ್ಣ ಇತ್ಯಾದಿ ಕೆಲವು ಪಾತ್ರಗಳು. ಅವರ ಈ ಪಾತ್ರಗಳನ್ನು ನೋಡಿದ ಮೇಲೆ ಬೇರೆ ಯಾರೇ ಆ ಪಾತ್ರಗಳನ್ನು ಮಾಡಿದರೂ ಈ ಪರಿ ಖುಷಿ ಸಿಗುವುದಿಲ್ಲ. ಅದರಲ್ಲೂ ಭುಡಾರಿಯವರ ಅಭಿಮನ್ಯುವಿನ ಉತ್ಸಾಹ, ಅಬ್ಬರ, ಶೌರ್ಯ, ಕೌರವ ಮಹಾಸೈನ್ಯದೆಡೆಗೆ ನೋಡಿ 'ಇದೇನು ಮಹಾ' ಅನ್ನುವ ಭಾವ ಮಹಾಭಾರತದ ಅಭಿಮನ್ಯುವಿಗೂ ಇತ್ತಾ ಗೊತ್ತಿಲ್ಲ ! ಹಾಗಾಗಿ ಅಭಿಮನ್ಯುವಿನ ಬಗೆಗೆ ಜನರ ಅಭಿಮಾನ ಹೆಚ್ಚುವುದರಲ್ಲಿ ಶ್ರೀಧರ ಭಂಡಾರಿಯವರ 'ಪಾತ್ರ'ವೂ ಇದೆ ! 'ದೊಡ್ಡಪ್ಪಾ ಕೊಡಿ ಅಪ್ಪಣೆ, ಕೌರವ ಸೈನ್ಯವನ್ನು ಪುಡಿಗಟ್ಟಿಬರುತ್ತೇನೆ' ಎಂದು ಭಂಡಾರಿಯವರ ಅಭಿಮನ್ಯು ಧರ್ಮರಾಯನಲ್ಲಿ ಹೇಳುವಾಗ ಧರ್ಮಜನಿಗೇನು ಕೂತಿರುವ ಪ್ರೇಕ್ಷಕನಿಗೂ ಇವ ಗೆದ್ದೇ ಬರುತ್ತಾನೆ ಅನ್ನುವ ವಿಶ್ವಾಸ ಮೂಡುತ್ತದೆ; ಒಂದು ಪಾತ್ರವನ್ನು ಆ ರೀತಿಯಲ್ಲಿ ಪ್ರಸ್ತುತಪಡಿಸುವುದೆಂದರೆ ತಮಾಷೆಯ ಮಾತಲ್ಲ.

ಶ್ರೀಧರ ಭಂಡಾರಿಯವರ ಧೀಂಗಿಣ ಬಹಳಷ್ಟು ಪ್ರಸಿದ್ಧ. 'ಶ್ರೀಧರ ಭಂಡಾರಿ ಬಿಡಿ, ಅವ್ರ ಕಮ್ಮಿ ಅಂದ್ರೂ ಮುನ್ನೂರು ಕುತ್ತು(ಧೀಂಗಿಣ) ಹಾಕ್ತಾರೆ' ಅನ್ನುವುದು ಪ್ರತಿಯೊಬ್ಬರೂ ಹೇಳುತ್ತಿದ್ದ ಮಾತು. ಆದರೆ ಭಂಡಾರಿಯವರು ಕೇವಲ ಕುತ್ತು ಹಾಕುವುದಕ್ಕಷ್ಟೇ ಸೀಮಿತರಾಗಲಿಲ್ಲ. ಆದ್ದರಿಂದಲೇ ಕುತ್ತಿನ ಹೊರತಾಗಿಯೂ ಅವರ ತಾಕತ್ತು ಅಭಿಮನ್ಯುವನ್ನು ಗೆಲ್ಲಿಸಿಬಿಡುತ್ತದೆ. ತಮ್ಮ ಇಪ್ಪತ್ತರ ಹರಯದ ಆಸುಪಾಸಿನಲ್ಲೇ ಅಭಿಮನ್ಯುವಾಗಿ ರಂಗಕ್ಕಿಳಿದು ಅಬ್ಬರಿಸತೊಡಗಿದ್ದ ಶ್ರೀಧರ ಭಂಡಾರಿ ಈಗ ಅರುವತ್ತಾರರಲ್ಲೂ ಅಭಿಮನ್ಯುವಾಗಿಯೇ ಕಣಕ್ಕಿಳಿಯುವುದರಲ್ಲಿ ಬಹಳಷ್ಟು ಉತ್ಸಾಹ, ಆಸಕ್ತಿ ತೋರಿಸುತ್ತಿದ್ದಾರೆನ್ನುವುದು ವಿಶೇಷ



ಸುಮಾರು ನಾಲ್ಕು ದಶಕಗಳ ನಂತರವೂ ಸಾಕಷ್ಟು ಸುಸ್ತು ಹೊಡೆಸುವ ಅಭಿಮನ್ಯು, ಬಭ್ರುವಾಹನವೇ ಮೊದಲಾದ ಪಾತ್ರಗಳಲ್ಲಿ ಕಾಣಿಸಿಕೊಳ್ಳಬೇಕೆನ್ನುವ ಅವರ ಹಂಬಲ ನಿಜಕ್ಕೂ ಸೋಜಿಗ, ತೆಂಡೂಲ್ಕರ್ ಟ್ವೆಂಟಿ ಟ್ವೆಂಟಿ ಆಡಿದಂತೆ!!

ಅವರ ಹಿಂದಿನ ಅಭಿಮನ್ಯುವಿಗೆ ಹೋಲಿಸಿದರೆ ಈಗಿನ ಅಭಿಮನ್ಯು ಅಷ್ಟು ಧೀಂಗಿಣ ಹಾಕುವುದಿಲ್ಲ. ಸುಮಾರು ನಲವತ್ತು ಕುತ್ತು ಕುಣಿದಲ್ಲಿಗೆ ಸುಸ್ತಾಗುತ್ತದೆ. ಆದರೆ ಗಮನಿಸಿ, ತನ್ನ ಅರುವತ್ತಾರನೆಯ ವಯಸ್ಸಿನಲ್ಲೂ ಭಂಡಾರಿಯವರು ನಲವತ್ತು ಧೀಂಗಿಣ ಹಾಕಿ ತಕ್ಷಣ ಮತ್ತೊಂದು ಏರುಪದಕ್ಕೆ ತಯಾರಾಗುತ್ತಾರೆಂದರೆ ಅವರ ಶಕ್ತಿ ಅದೆಂತಹದ್ದಿರಬಹುದು? ಈಗಿನ ಕೆಲವು ಯುವ ಅಭಿಮನ್ಯುಗಳೇ ನಲವತ್ತು ಧೀಂಗಿಣ ಹೊಡೆಯುವುದಿಲ್ಲ! ಈ ನಡುವೆ ಭಂಡಾರಿಯವರಿಗೂ ತಾನು ಮೊದಲಿನಂತೆ ಧೀಂಗಿಣ ಹೊಡೆಯಲು



ತನ್ನ ವಯಸ್ಸು ಬಿಡುತ್ತಿಲ್ಲ ಅನ್ನುವುದು ಅರ್ಥವಾದಂತಿದೆ. ಹಾಗಾಗಿಯೇ ಅವರು ತನ್ನ ಬೇರೆಲ್ಲಾ ಪ್ರತಿಭೆಗಳನ್ನು ಬಳಸಿ ಅಭಿಮನ್ಯುವನ್ನು ಈಗಲೂ ರೋಚಕಗೊಳಿಸುತ್ತಿದ್ದಾರೆ. ಅವರ ಮುಖಭಾವ, ಮಾತಿನ ವೇಗ, ಅಭಿನಯ ಇವುಗಳೆಲ್ಲವೂ ಸೇರಿ ಅವರು ಮೊದಲಿನಷ್ಟು ಧೀಂಗಿಣ ಹಾಕದಿರುವುದನ್ನು ಮರೆಸಿಬಿಡುತ್ತವೆ. ಅಭಿಮನ್ಯುವಿನ ಗತ್ತು ಪ್ರೇಕ್ಷಕರನ್ನು ಬೆರಗುಗೊಳಿಸುತ್ತದೆ. ಆದ್ದರಿಂದಲೇ ಈ ಅರುವತ್ತಾರರಲ್ಲೂ ಭಂಡಾರಿಯವರ ಅಭಿಮನ್ಯುವಿಗೆ ಎದುರಾದ ಇನ್ನೊಂದು ಅಭಿಮನ್ಯು ಇಲ್ಲ ಎಂದು ಧಾರಾಳವಾಗಿ ಹೇಳಬಹುದು.

ಈ ನಡುವೆ ತಮಾಷೆಯ ಸಂಗತಿಯೆಂದನ್ನು ನಿಮಗೆ ಹೇಳಬೇಕು. ಆರಂಭದ ದಿನಗಳಲ್ಲಿ ಅಂದರೆ ಸುಮಾರು ನಲವತ್ತು ವರ್ಷಗಳ ಹಿಂದೆ ಭಂಡಾರಿಯವರ ಅಭಿಮನ್ಯುವಿಗೆ ಪಾತಾಳ ವೆಂಕಟ್ರಮಣ ಭಟ್ಟರು ಸುಭದ್ರೆಯಾಗಿ ಕಾಣಿಸಿಕೊಳ್ಳುತ್ತಿದ್ದರು. ಭಂಡಾರಿಯವರ ಈಗಿನ ಅಭಿಮನ್ಯುವಿಗೆ ಪಾತಾಳರ ಮಗ ಅಂಬಾಪ್ರಸಾದರು ಸುಭದ್ರೆಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ ! ಪ್ರಾಯಶಃ ಈ ನಲವತ್ತು ವರ್ಷಗಳಲ್ಲಿ ಭಂಡಾರಿಯವರ ಅಭಿಮನ್ಯುವಿಗೆ ವಯಸ್ಸೇ ಆಗಿಲ್ಲ !! ಹೌದು, ಶ್ರೀಧರ ಭಂಡಾರಿಯವರಿಗೂ ಅವರ ಅಭಿಮನ್ಯುವಿಗೂ ವಯಸ್ಸಾಗದಿರಲಿ !

ಅಂದಹಾಗೆ ಅಭಿಮನ್ಯು ಅನ್ನುವಾಗ ಹೊಸಹಿತ್ಲು ಮಹಾಲಿಂಗ ಭಟ್ಟರೂ ನೆನಪಾಗುತ್ತಾರೆ. ಅವರ ಕಥೆ ಇನ್ನೊಮ್ಮೆ ಹೇಳಿಯೇನು... f

ನೂಪುರ ಭ್ರಮರಿ

... ನರ್ತನ ಜಗತ್ತಿಗೊಂದು ಪರಿಭ್ರಮಣ

## ಚಂದಾ ವಿವರ

ಲಾಭಾಂಶದ ಬಗ್ಗೆ ಆಗ್ರಹವಿಲ್ಲದ ಪತ್ರಿಕೆಯ ಖರ್ಚು ವೆಚಗಳನ್ನು ಸರಿತೂಗಿಸುವುದು ಅಷ್ಟು ಸುಲಭದ ಮಾತಲ್ಲ ಎಂಬುದು ಆತ್ಮೀಯ ಓದುಗರಾದ ನಿಮಗೆ ತಿಳಿದೇ ಇದೆ. ಅಷ್ಟಕ್ಕೂ ಮೊದಲಿನಿಂದಲೂ ನೂಪುರ ಭ್ರಮರಿಗೆ ಚಂದಾ ವಿವರ ಕಡ್ಡಾಯವಲ್ಲ ಮತ್ತು ಓದುಗರ ಸಂಪರ್ಕಕ್ಕೆ ಅದೊಂದೇ ಮಾನದಂಡವೂ ಅಲ್ಲ. ಹಾಗಾಗಿ ಎಷ್ಟೋ ಬಾರಿ ಉಚಿತವಾಗಿಯೇ ಕಳಿಸಿಕೊಟ್ಟದ್ದಿದೆ. ಆದರೆ ಹೆಚ್ಚುತ್ತಿರುವ ಪ್ರಸರಣ ಸಂಖ್ಯೆ ಮತ್ತು ಖರ್ಚು–ವೆಚ್ಚಗಳನ್ನು ಗಮನಿಸಿದಾಗ ಮತ್ತು ಪ್ರಿಯ ಓದುಗರ ಅಪೇಕ್ಷೆಯಡಿಯಲ್ಲಿ ಚಂದಾವಿವರಗಳನ್ನು ಕೊಡುತ್ತಿದ್ದೇವೆ. ರಶೀದಿಯನ್ನು ಕಳಿಸಿಕೊಡಲಾಗುವುದು. ಈಗಾಗಲೇ ಸದಸ್ಯರಾದವರು ಇದನ್ನು ಪರಿಗಣಿಸಬೇಕಿಲ್ಲ. ಮೊತ್ತವನ್ನು ಕಳಿಸುವವರು ಮನಿಯಾರ್ಡರ್ ಅಥವಾ 'ಸಂಪಾದಕರು, ನೂಪುರ ಭ್ರಮರಿ' ಎಂಬ ಹೆಸರಿಗೆ ಡಿ.ಡಿ. ಕಳಿಸುವುದು ಉತ್ತಮ. ಚೆಕ್ ಕಳಿಸುವುದಿದ್ದಲ್ಲಿ ಬ್ಯಾಂಕ್‌ಕಮಿಷನ್ ಮೊತ್ತ 40/– ರೂ ಸೇರಿಸಿ ಕಳಿಸುವುದು. ಸಹಕರಿಸಿ.

| | | |
|---|---|---|
| ವಾರ್ಷಿಕ ಚಂದಾ : (ಅಂಚೆ ವೆಚ್ಚ ಸಹಿತ) | : | ರೂ. 100/– |
| ಪೋಷಕ | : | ರೂ. 1,000/– |
| ಮುದ್ರಣ ನಿಧಿ ( ಮಹಾಪೋಷಕ) | : | ರೂ. 3,500/– |

■ ■ ■ ■ ■ ■ ■ ■ ■ ■ ■ ■ ■

ವಿಮರ್ಶೆಯ ಕುರಿತಾಗಿ ಪ್ರತ್ಯೇಕ ಅಂಕಣವು ನೂಪುರ ಭ್ರಮರಿಯ ವೆಬ್‌ಸೈಟ್‌ನಲ್ಲಿ ಅನಾವರಣಗೊಂಡಿದ್ದು 2011ನೇ ಸಾಲಿನ ವಿಮರ್ಶೆಗಳನ್ನು (ಯಾವುದೇ ಪ್ರತ್ರಿಕೆ–ನಿಯತಕಾಲಿಕೆ–ವೆಬ್ ಪತ್ರಿಕೆ ಇತ್ಯಾದಿಗಳಲ್ಲಿ ಪ್ರಕಟಿತ ಅಥವಾ ಅಪ್ರಕಟಿತ ವಿಮರ್ಶೆ, ವರದಿ) ಲೇಖಕರು ಕಳಿಸಬಹುದಾಗಿದೆ. ಈ ಮೂಲಕ ವಿಮರ್ಶಾ ಕ್ಷೇತ್ರಕ್ಕೆ ಮತ್ತು ಅದರ ಪ್ರಶಸ್ತಿಗೆ ಹೆಚ್ಚಿನ ಉತ್ತೇಜನ ಮತ್ತು ಪಾರದರ್ಶಕತೆಯು ಒದಗಲಿದ್ದು ಮುಂದಿನ ಸಾಲಿನ ಪ್ರಶಸ್ತಿಯನ್ನು ಆಯ್ಕೆ ಮಾಡುವಲ್ಲಿ ಓದುಗರೂ ನಮ್ಮೊಂದಿಗೆ ಜೊತೆಯಾಗಲಿದ್ದಾರೆ. ಅದಕ್ಕೆ ಈಗಲಿಂದಲೇ ವೇದಿಕೆಯು ರೂಪುಗೊಳ್ಳುತ್ತಿದ್ದು; ಆಸಕ್ತರು www.noopurabhramari.com ನ್ನು ಸಂಪರ್ಕಿಸಬಹುದು.

ಅಂತೆಯೇ ಆಸಕ್ತರು ಉತ್ತಮ ನೃತ್ಯ/ನಾಟ್ಯ ಸಂಬಂಧೀ ಫೋಟೋಗಳಿದ್ದರೆ ಮುಖಪುಟ ವಿನ್ಯಾಸಕ್ಕಾಗಿ ಕಳಿಸಿಕೊಡಬಹುದು. ಕಲಾವಿದರ ಫೋಟೋಗಳಿದ್ದಲ್ಲಿ ಆದಷ್ಟೂ ಸೈಡ್ ಪೋಸ್ ಫೋಟೋ ಅಂದರೆ ಮುಖದ ಒಂದು ಬದಿ ಮಾತ್ರ ಕಾಣುವಂತಹ ಉತ್ತಮ ನೆರಳು ಬೆಳಕಿನ ಸಂಯೋಜನೆಯ ಛಾಯಾಚಿತ್ರಗಳನ್ನು ಕಳಿಸಿಕೊಡಿ.

**ಮುದ್ರಾರ್ಣವ** ಭಾರತೀಯ ನೃತ್ಯಗಳು–ವೇದ–ವಿದ್ಯೆ–ವಿಜ್ಞಾನ–ತಂತ್ರ–ಮಂತ್ರ–ಪುರಾಣ–ಯೋಗ–ವೈದ್ಯ–ಚಿಕಿತ್ಸಾ ವಿಧಾನಗಳಲ್ಲಿ ಕಂಡುಬರುವ ಹಸ್ತ –ಮುದ್ರೆಗಳ ಕುರಿತಾದ ; 1000ಕ್ಕೂ ಮಿಗಿಲು ಹಸ್ತ–ಮುದ್ರೆಗಳ ಆಳ ಅಧ್ಯಯನ, ಶ್ಲೋಕ, ಹಿನ್ನಲೆಯುಳ್ಳ, ಬಹುಮುಖೀ ಚಿಂತನೆಯ ಸಂದರ್ಶನ–ಸಮೀಕ್ಷೆ–ಪುರಾತನ ಗ್ರಂಥ ಪರಾಮರ್ಶನಗಳನ್ನೊಳಗೊಂಡ ವಿದ್ವಾಂಸರ ಮನ್ನಣೆ ಪಡೆದ ಸಂಶೋಧನಾ ಕೃತಿ. ಬೆಲೆ : 250/– ರೂ. ಸಂಪರ್ಕಿಸಿ. 99641 40927

**ಪತ್ರಿಕೆಯ ಬಳಗದವರಾಗಿ ಜಿಲ್ಲಾ ಕೇಂದ್ರಗಳಲ್ಲಿ ಮೇಲ್ವಿಚಾರಣೆಯನ್ನು ನಿರ್ವಹಿಸುವವರ ಹೆಸರುಗಳು ಕೆಳಗಿನಂತಿವೆ. ಆಸಕ್ತ ಓದುಗ, ಕಲಾವಿದರು ಕೆಳಕಂಡವರನ್ನು ಸಂಪರ್ಕಿಸಿ ಪತ್ರಿಕೆಯ ಚಂದಾದಾರರಾಗಬಹುದು ; ಮುದ್ರಣ ನಿಧಿಗೆ ಸಹಕರಿಸಬಹುದು ; ಪತ್ರಿಕೆ ಮತ್ತು ಕಾರ್ಯಕ್ರಮಗಳ ಪ್ರಾಯೋಜಕತ್ವ ವಹಿಸಿಕೊಳ್ಳಬಹುದು ; ಹೆಸರು ನೋಂದಾಯಿಸಿ ಬಳಗದವರಾಗಬಹುದು.**

**ವಿಷ್ಣುಪ್ರಸಾದ್ ನಿಡ್ಡಾಜೆ,** ಪ್ರಸರಣಾಧಿಕಾರಿ ( ಮೊಬೈಲ್ : 94817 65544)

**ಎನ್. ರಾಮಭಟ್,** ಉಡುಪಿ (ಮೊಬೈಲ್ : 92414 42833)

ಸಿ. **ಎಸ್. ರಾಮಚಂದ್ರ ಹೆಗಡೆ,** ಬೆಂಗಳೂರು. ( ಮೊಬೈಲ್ : 99863 72503)

**ದೀಪಕ್ ಕುಮಾರ್,** ಪುತ್ತೂರು, ದಕ್ಷಿಣ ಕನ್ನಡ ( ಮೊಬೈಲ್ : 99640 23548)

**ಬಿ.ಜಿ. ನಾರಾಯಣ ಭಟ್,** ಮಡಿಕೇರಿ ( ಫೋನ್ : 08272–222709)

## "ನೃತ್ಯ ಮಾರ್ಗ ಮುಕುರ" ಕೃತಿ

ಮನೋರಮಾ ಬಿ.ಎನ್. ಅವರ ನೃತ್ಯಸಂವೇದನೆಯ 'ಮುದ್ರಾರ್ಣವ'– ಹಸ್ತಮುದ್ರೆಗಳ ಸಂಶೋಧನಾ ಕೃತಿಯ ತರುವಾಯ 'ಶ್ರೀ ಸಾನ್ನಿಧ್ಯ ಪ್ರಕಾಶನ'ದಿಂದ ಅನಾವರಣಗೊಂಡ ಮತ್ತೊಂದು ನೃತ್ಯ ಸಂವೇದನೆಯ ಕೃತಿ 'ನೃತ್ಯಮಾರ್ಗ ಮುಕುರ'. ಭರತನಾಟ್ಯದ ಮಾರ್ಗಪದ್ಧತಿಯ ಮಜಲುಗಳನ್ನು, ನೃತ್ಯಾಂಗಗಳನ್ನು ದಾಖಲಿಸುವ, ಸಮಗ್ರ ಸಂಕ್ಷಿಪ್ತ ವಿವರವನ್ನೀಯುವ 160 ಪುಟಗಳ ಈ ಕೃತಿ, ಆಸಕ್ತ ಸಹೃದಯರ ಪಾಲಿಗೆ ಸಾಕಲ್ಯ ದೃಷ್ಟಿಯ ಅಧ್ಯಯನಸಾಮಗ್ರಿ. ಪುಸ್ತಕದ ಬೆಲೆ: 125ರೂ.



ಭರತನಾಟ್ಯ–ಭರತನ ನಾಟ್ಯಶಾಸ್ತ್ರ ಪ್ರಸ್ತುತ ಸಂದರ್ಭದಲ್ಲಿ ಗೊಂದಲವನ್ನು ಸೃಷ್ಟಿಸಿಕೊಂಡ ಪಾರಿಭಾಷಿಕ ಪದಗಳಾಗಿ ಮಾರ್ಪಟ್ಟಿವೆ. 'ಇಂದಿನ' ಭರತನಾಟ್ಯ ಎಂಬ ನೃತ್ಯಪದ್ಧತಿಗೂ 'ಅಂದಿನ' ಭರತನ ನಾಟ್ಯಶಾಸ್ತ್ರಗ್ರಂಥಕ್ಕೂ ಇರುವ ಸಂಬಂಧಗಳ ಬಗ್ಗೆ ಗಹನವಾದ ಚರ್ಚೆಗಳು ನಡೆಯುತ್ತಿದ್ದರೂ ತಾರ್ಕಿಕ, ತಲಸ್ಪರ್ಶಿಯಾದ ಅಧ್ಯಯನಗಳಾಗಿರುವುದು ಬೆರಳೆಣಿಕೆಯಷ್ಟು. ಈ ನಿಟ್ಟಿನಲ್ಲಿ **'ನೃತ್ಯ ಮಾರ್ಗ ಮುಕುರ'** ಭರತನಾಟ್ಯ ನೃತ್ಯಮಾರ್ಗಕ್ಕೆ ಹಿಡಿದ ಕೈಗನ್ನಡಿಯೇ ಆಗಿರುವುದು ಅಭಿನಂದನೀಯ.– ಎಂದಿದ್ದಾರೆ ಪುಸ್ತಕಕ್ಕೆ ನಲ್ನುಡಿಯನ್ನಿತ್ತ ಖ್ಯಾತ **ಕಲಾ–ಇತಿಹಾಸ ಸಂಶೋಧಕಿ ಡಾ. ಕರುಣಾ ವಿಜಯೇಂದ್ರ.**

**ನೃತ್ಯ ಮಾರ್ಗ ಮುಕುರ ನನ್ನ ನೃತ್ಯ ಸಂಬಂಧೀ ಪುಸ್ತಕ ಸಂಗ್ರಹದಲ್ಲೊಂದು ಅಮೂಲ್ಯ ಪುಸ್ತಕವಾಗಿದೆ. ವಿದ್ವತ್ ದರ್ಜೆಯ ವಿದ್ಯಾರ್ಥಿಗಳಿಗೆ ಸರ್ಕಾರದ ಪಠ್ಯ ಇನ್ನೂ ಲಭ್ಯವಾಗಿಲ್ಲದ ಕಾರಣ ಈ ಪುಸ್ತಕ ಸಹಕಾರಿಯಾಗುವುದು ಸಾಧ್ಯವಿದೆ. ಸಂಶೋಧನಾಸಕ್ತರಿಗೆ ಮೂಲ ಆಕರ ಗ್ರಂಥಗಳ ಬಗೆಗಿನ ಸಾಕಷ್ಟು ಮಾಹಿತಿ ಇದರಲ್ಲಿ ಲಭ್ಯವಿರುವುದು ಒಂದು ಗಮನಾರ್ಹ ವಿಷಯ. ನಿಮ್ಮ ಪ್ರಯತ್ನ ಖಂಡಿತಕ್ಕೂ ಸ್ತುತ್ಯರ್ಹ. ನಿಮ್ಮಿಂದ ಇಂತಹ ಹೊಸ ಹೊಸ ಉಪಯುಕ್ತ ಪುಸ್ತಕಗಳು ಹೊರಬರುವಂತಾಗಲಿ.** *– ವಿದುಷಿ ಭ್ರಮರಿ ಶಿವಪ್ರಕಾಶ್, D/o ಉದ್ಯಾವರ ಮಾಧವ ಆಚಾರ್ಯ, ನಾದನೃತ್ಯ ಸ್ಕೂಲ್ ಆಫ್ ಡ್ಯಾನ್ಸ್.*

**ಪುಸ್ತಕಗಳಿಗೆ ಬೆಂಗಳೂರಿನ ಸಪ್ನಾ ಬುಕ್ ಹೌಸ್, ಚೈತ್ರ ಬುಕ್‌ಹೌಸ್ ; ಅಂಕಿತ ಪುಸ್ತಕ–ಗಾಂಧೀಬಜಾರ್; ಗೋಖಲೆ ಸಂಸ್ಥೆ–ಬಸವನಗುಡಿ, ರಾಷ್ಟ್ರೋತ್ಥಾನ, ವೇದಾಂತ ಪುಸ್ತಕ–ಚಾಮರಾಜಪೇಟೆ, ಮಂಗಳೂರಿನ ಅತ್ರಿ ಬುಕ್‌ಹೌಸ್ ಅಥವಾ ನೂಪುರ ಭ್ರಮರಿ ಪತ್ರಿಕೆ, ಉಡುಪಿ ವಲಯದ ಪ್ರಸರಣಾ ಮುಖ್ಯಸ್ಥ ರಾಮಭಟ್ ಅವರನ್ನು ಸಂಪರ್ಕಿಸಬಹುದು.**




Inner II Cover